Mysore Agricultural Debtors (Temporary Protection) Bill, 1973-Motion to Consider

Sri A. SHANKAR ALVA (Minister for Co-operation).—Madam Speaker, I beg to move :

'That the Mysore Agricultural Debtors' (Temporary Protection) Bill, 1973, be taken in to consideration."

MADAM SPEAKER.—Motion moved :

"That the Mysore Agricultural Debtors (Temporary Protection) Bill, 1973. be taken into consideration."

†Sri A. SHANKAR ALVA.—Here is a small Bill. It was necessiated on account of the High Court decision that struck the Mysore Agricultural Debtors Relief Act, 1966 and the Rules thereunder. The Mysore Agricultural Debtors Relief Act, 1966 gave some protection to the Agriculturists under Sections 3 and 4. Under Section 4 which deals with Application for adjustment of Debts, if an application is made to the Court for adjustment of debts, some adjustments are made in respect of the debts of the agriculturist and he was given some relief. This Act was in vouge in all the parts of the State. Formerly a portion of this State was governed by the Madras Act, a portion by the Bombay Act and a portion by the Hyderabad Act. When all these different Acts were consolidated and the Mysore Agricultural Debtors Relief Act, 1966, was passed all the other Acts were repealed under Section 64. The Acts repealed were :

1. The Mysore Debt Conciliation, Act 1937 (Mysore Act No. VI of 1937);
2. The Madras Debt Conciliation Act, 1936 (Madras Act XI of 1936); and
3. The Debt Conciliation Act, 1940 (Coorg Act II of 1940).

Thereby all Boards established under the repealed Acts were dissolved in the respective areas when this consolidated Act of 1966 was brought into force. Unfortunately the High Court struck down the provisions of this Act on the

ground that some exception in respect of debts an Agriculturist owed to the Bank and such other institutions had been made, and the High Court held that this was a discrimination and the Act had to be struck down. Now, the Mysore Government has filed an appeal before the Supreme Court. Unfortunately it is not yet taken up. It was expected that it would be taken up by now. The Advocate appearing for the Mysore Government made some attempt for our case being taken up early. It was not possible and so it is feared that the agriculturists are left without protection. Hence the Government thought it fit to pass a temporary Act. So a provision is made in this Bill where by the properties of an agriculturist will not be sold for a period of two years for realisation of any debt. This is only a temporary measure. We are awaiting the decision of the Supreme Court. If the Supreme Court restores the Mysore Agricultural Debtors Relief Act 1966, the Act will come into force; otherwise, there will have to be a suitable separate legislation. Again, to safeguard the interests of the creditors, it has also been proposed that the time for the execution of decrees will be extended by two years so that all the decree holders may not be the sufferers.

This measure is intended only for the benefit of agriculturists. Practically it follows the relevant provisions of the Act, namely Section 4, which relates to adjustment of debts. So, I submit that this House may be pleased to pass this Bill.

†ಶ್ರೀ ಟಿ.ಎಂ.ಮಂಜುನಾಥ (ತಿಪಟೂರು).— ಮಾನ್ಯ ಸಭಾಧ್ಯಕ್ಷಣಿಯವರೇ, ರೈತರ ರುಣಪರಿಹಾರ ಬಿಲ್ಲಿನ ಅಮೆಂಡಮೆಂಟ್ ಪ್ರಕಾರ ಅವರ ಪ್ರೊಟೆಕ್ಷನಗೋಸ್ಕರ ತಂದಿರುವ ಕಾಯಿದೆಯನ್ನು ಕುರಿತು ನಾನು ಸಂಪೂರ್ಣವಾಗಿ ವಿರೋಧ ವ್ಯಕ್ತಪಡಿಸದಿದ್ದರೂ ಸಹ ಅದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಬಹುಶಃ ಲೇನಾ ದೇನಾ ಲೇವಾದೇವಿ ಮಾಡುವುದು ರೈತನಾದವನು ಸಂಘಜೀವಿಯಾದ ತಕ್ಷಣ ಮಾಡತಕ್ಕ ಒಂದು ವೃತ್ತಿ. ಆ ವೃತ್ತಿಯನ್ನು ರೈತಾಪಿ ಜನರು ಅನೇಕ ಸಂದರ್ಭಗಳಲ್ಲಿ ಮಾಡುತ್ತಾರೆ. ಮಾನವನಾದವನು ತನ್ನ ದಿನನಿತ್ಯ ಜೀವನವನ್ನು ನಡೆಸಬೇಕಾದರೆ ಸಮಾಜದಲ್ಲಿ ಕೆಲವು ಇತರೇ ವರ್ಗದವರ ಸಹಾಯವನ್ನು ಪಡೆಯವುದು ಅವನ ಸ್ವಭಾವ. ಈ ದೃಷ್ಟಿಯಲ್ಲಿ ವ್ಯವಹಾರ ನಡೆಯುತ್ತಾ ಇರಬೇಕಾದರೆ ವ್ಯವಸಾಯಗಾರನು ತನ್ನ ರುಣವನ್ನು ಹೇಗೆ ಯಾವ ರೂಪದಲ್ಲಿ ಪರಿಹಾರ ಮಾಡಿಕೊಳ್ಳ

ಬಹುದೆಂಬುದನ್ನು ಯೋಚನೆ ಮಾಡಬೇಕು. ನಾನು ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಸಾಮಾನ್ಯವಾಗಿ ರೈತನಾದವನು ಸಾಲ ಪಡೆಯತಕ್ಕದ್ದು. ತನ್ನ ವ್ಯವಸಾಯದ ಅಭಿವೃದ್ಧಿಗೋಸ್ಕರ ಹಾಗೂ ವ್ಯವಸಾಯಕ್ಕೆ ಅವಶ್ಯಕವಾಗಿ ಬೇಕಾದಂತ ಸಕಲ ಸಾಮಗ್ರಿಗಳನ್ನು ಪಡೆಯುವುದಕ್ಕೋಸ್ಕರ, ಮತ್ತು ತನ್ನ ಒಂದು ಜಮೀನನ್ನು ಫಲವತ್ತಾಗಿ ಮಾಡಿ ಅದರಿಂದ ಹೆಚ್ಚಿಗೆ ಆರ್ಥಿಕ ಫಲವನ್ನು ಪಡೆಯುವುದಕ್ಕೋಸ್ಕರ ಎಂಬುದು ಸರ್ವವಿಧಿತವಾಗಿದೆ. ಅದಕ್ಕೋಸ್ಕರವಾಗಿಯೇ ಸರ್ಕಾರ ಇವರಿಗೆ ಸಾಲ ದೊರೆಯುವಂತೆ ಮಾಡಲು ಸೊಸೈಟಿಗಳನ್ನು ಸ್ಥಾಪಿಸಿದ್ದು, ಮತ್ತು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದು. ಆದರೆ ರೈತಾಪಿವರ್ಗಕ್ಕೆ ಈ ಒಂದು ಸಹಾಯ ಸರ್ಕಾರದ ವತಿಯಿಂದ ದೊರೆತರೆ, ಇನ್ನೊಂದು ಸಹಾಯ ಸಾರ್ವಜನಿಕ ವತಿಯಿಂದ ದೊರಕತಕ್ಕ ಪದ್ಧತಿ. ಸಮಾಜದಲ್ಲಿ ಒಬ್ಬರು ಇನ್ನೊಬ್ಬರಲ್ಲಿ ಹೋಗಿ ಸಹಾಯವನ್ನು ಪಡೆಯುವುದು ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ರೂಢಿಯಲ್ಲಿದೆ. ಆದರೆ ಈ ದಿವಸ ಸರ್ಕಾರದವರು ಈ ರೈತಾಪಿವರ್ಗಕ್ಕೆ ಏನೇನು ಸಾಲದೊರೆಯತಕ್ಕ ಸಾಲಭ್ಯಗಳನ್ನು ಸಾಕರ್ಯಗಳನ್ನು ಜಾರಿಗೆ ತಂದಿದ್ದರೂ ಅದು ಆ ರೈತಾಪಿವರ್ಗದ ದಿನಂಪ್ರತಿಯ ವ್ಯವಹಾರಗಳಿಗೆ ಎಟಕದಿರುವುದರಿಂದ ಈ ದಿವಸ ರೈತರು ವರ್ತಕರಲ್ಲಿ ವ್ಯವಹಾರ ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಸರ್ಕಾರದವರು ಅದಕ್ಕೆಲ್ಲಾ ಒಂದು ಅನುಕೂಲ ಕಲ್ಪಿಸಿದ್ದರೆ ಅವರೇಕೆ ವರ್ತಕರ ಹತ್ತಿರಬರಬೇಕಾಗಿತ್ತು?

ಶ್ರೀ ಕೆ. ಬಿ. ಶಿವಯ್ಯ.—ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರದವರೇ ಈ ಮಸೂದೆಯನ್ನು ಮಾಡಿದ್ದು.

ಶ್ರೀ ಟಿ. ಎಂ. ಮಂಜನಾಥ್:—ಆ ಮಾತು ಹಾಗಿರಲಿ. ನಾನು ಶ್ರೀ ಶಿವಯ್ಯನವರಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಹಿಂದೆ ಈ ಶಾಸನವನ್ನು ಮಾಡಿದಾಗ ಶ್ರೀ ಶಿವಯ್ಯನವರು ಆ ಕಾಂಗ್ರೆಸ್ ಪಕ್ಷದಲ್ಲಿರಲಿಲ್ಲವೇ? ಇದಕ್ಕೆ ನೀವು ಭಾಗಿಗಳಾಗಿರಲಿಲ್ಲವೇ? ಏನೋ ಈ ದಿವಸ ಆ ರೈತಾಪಿ ವರ್ಗದಲ್ಲಿರತಕ್ಕ ಜನರ ಮನಸ್ಸನ್ನು ನಿಮ್ಮ ಪಕ್ಷದ ಕಡೆಗೆ ವಾಗುವಂತೆ ಮಾಡಿಕೊಳ್ಳಲು ಈ ದಿವಸ ಈ ನಾಟಕವಾಡುವುದಕ್ಕೆ ಹೊರಟಿದ್ದೀರಿ. ಈ ದಿವಸ ರೈತರ ಈ ಋಣಪರಿಹಾರವನ್ನು ನೀವು ಮಾಡವುದಾದರೂ ಹೇಗೆ? ಯಾರೋ ಯಾರಿಗೊ ಕೊಟ್ಟಿರತಕ್ಕ ಗಂಟನ್ನು ನೀವು ಕೊಡಬೇಡ ಎಂದು ಈ ದಿವಸ ಹೇಳುವುದಕ್ಕೆ ಹೊರಟಿದ್ದೀರಿ. ಇದು ನ್ಯಾಯವೇ? ನೀವು ಅವರನ್ನು ಋಣಮುಕ್ತರನ್ನಾಗಿ ಮಾಡಬೇಕಾಗಿದ್ದರೆ, ಅವರು ಯಾರಿಂದ ಹಣವನ್ನು ತಂದಿದ್ದಾರೆ ಅವರಿಗೆ ಆ ಹಣವನ್ನು ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಾ? ನೀವು ಏನೇ ಇಂಥ ಕಾನೂನುಗಳನ್ನು ಮಾಡಿದರೂ ಸಮಾಜದಲ್ಲಿ ಒಬ್ಬರು ಇನ್ನೊಬ್ಬರಲ್ಲಿ ನೆರವನ್ನು ಪಡೆಯುವುದನ್ನು ತಪ್ಪಿಸಲು ಸಾಧ್ಯವೇ ಎಂಬುದನ್ನು ಆಲೋಚನೆ ಮಾಡಬೇಕು. ದಿನ ಬೆಳಗಾದರೆ ರೈತಾಪಿವರ್ಗದಲ್ಲಿ ಇರತಕ್ಕ ಜನರಿಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಮನೆಗಳಲ್ಲಿ ಮಗ ಮಗಳ ಲಗ್ನಕಾರ್ಯಕ್ಕೆ, ಅವನಿಗೆ ಕಾಯಿಲೆ ವಗೈರೆಗಳಾದರೆ ಆಸ್ಪತ್ರೆಗೆ

ಹಣ ಕೊಡುವುದಕ್ಕೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆ? ಅದನ್ನು ಮಾಡದೆ ಇಂಥ ಕಾನೂನನ್ನು ತಂದರೆ ಆ ವರ್ಗ ಉದ್ಧಾರವಾಗುವುದಿಲ್ಲ, ಅದು ಸರ್ವನಾಶವಾಗುತ್ತದೆ. ಆದರೆ ಸಮಾಜದಲ್ಲಿ ಈ ದಿವಸ ಯಾರು ಆ ರೈತನನ್ನು ಶೋಷಣೆ ಮಾಡುತ್ತಿದ್ದಾನೆ ಅವರನ್ನು ಬಲಿಹಾಕಿ ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಈ ದಿವಸವು ಕೆಲವು ಗ್ರಾಮಗಳಲ್ಲಿ ಕೆಲವು ದೊಡ್ಡ ರೈತರಾದವರು ಬಿತ್ತನೆ ಕಾಲದಲ್ಲಿ ಸಣ್ಣ ಪುಟ್ಟ ರೈತರಿಗೆ ೫೦ ಸೇರು ಭತ್ತವನ್ನು ಕೊಟ್ಟು ಕೊಯಲುಗಾಲದಲ್ಲಿ ಅವನಿಂದ ಒಂದು ಪಲ್ಲ ಭತ್ತ ವಸೂಲ್ಮಾಡುತ್ತಾನೆ, ಗೊಬ್ಬರಕ್ಕೆ ೫೦ ರೂಪಾಯಿ ಕೊಟ್ಟಿದ್ದರೆ, ಅದಕ್ಕೆ ನೂರು ರೂಪಾಯಿ ವಸೂಲ್ಮಾಡುತ್ತಾರೆ. ಅಂಥವರ ಬಗ್ಗೆ ಸರ್ಕಾರದವರು ಏನು ಕ್ರಮ ಬೇಕಾದರು ತೆಗೆದುಕೊಳ್ಳಲಿ. ಅಂಥ ಸಮಾಜ ಘಾತಕರ ವಿಷಯದಲ್ಲಿ ನಾನು ಈಗ ವಾದ ಮಾಡುತ್ತಿಲ್ಲ. ಸಮಾಜದಲ್ಲಿ ಈ ದಿವಸ ಸರ್ಕಾರಕ್ಕೆ ಕೊಡಬೇಕಾದ ಟ್ಯಾಕ್ಸನ್ನು ಕೊಡದೆ, ಅಕ್ರಮದಿಂದ ಲಾಭಗಳಿಸುತ್ತಿರುವವರ ಬಗ್ಗೆ ಸರ್ಕಾರದವರು ಯಾವ ಕಾನೂನನ್ನು ಮಾಡಿದ್ದಾರೆ? ಅದನ್ನು ಬಿಟ್ಟು ಏನೋ ಒಂದು ಸಮಾಜದಲ್ಲಿ ಪೂರ್ವ ಪದ್ಧತಿಯಂತೆ ಒಬ್ಬರಿಗೊಬ್ಬರ ಅನುತನುವುಗಳನ್ನು ಅರಿತು ಅದರಲ್ಲೂ ಸರ್ಕಾರದವರು ಮಾಡಿರತಕ್ಕ ಕಾನೂನುಗಳನ್ನು ಅನುಸರಿಸಿ, ಅವರ ಕಾನೂನು ಪ್ರಕಾರ ಲೇವಾದೇವಿ ಮಾಡತಕ್ಕವರ ಬಗ್ಗೆ ಇಂಥ ಕಾನೂನುಗಳನ್ನು ಮಾಡುವುದರಿಂದ ನಾಳೆ ಈ ಸಣ್ಣ ಪುಟ್ಟ ವರ್ತಕರಿಗೆ ಜೀವನಕ್ಕೆ ತೊಂದರೆಯುಂಟಾಗುವುದಲ್ಲದೆ, ಆ ರೈತರೂ ಕೂಡ ಹಾಳಾಗಿ ಹೋಗುತ್ತಾರೆ. ರೈತರಿಗೆ ಭೂಮಿ ಹೇಗೆ ಜೀವನಕ್ಕೆ ಒಂದು ಮಾರ್ಗವಾಗಿದೆಯೋ ಹಾಗೇ ಸಣ್ಣ ಪುಟ್ಟ ವರ್ತಕರಿಗೆ ಈ ಲೇವಾದೇವಿಯೂ ಒಂದು ಜೀವನದ ಕಸುಬಾಗಿದೆ. ಅದರೆ ಇದರಲ್ಲಿ ನನ್ನ ಒಂದು ಸಲಹೆ ಏನೆಂದರೆ ಯಾವ ರೈತನಿಗೆ ವರ್ಷಕ್ಕೆ ೨೦೦೦ ರೂಪಾಯಿಗಳಿಗೆ ಮೀರಿದ ವರಮಾನ ಇರುತ್ತದೋ ಅಂಥವರಿಗೆ ಈ ಮಸೂದೆಯ ರಿಯಾಯಿತಿಯನ್ನು ಕೊಡುವುದು ಬೇಡ ಎಂದು ಹೇಳುತ್ತೇನೆ. ಹಿಂದೆ ೧೯೭೦-೭೧ ರಲ್ಲಿ ಈ ಮಸೂದೆಯನ್ನು ಸಭೆಯ ಮುಂದೆ ತಂದ ಕಾಲಕ್ಕೆ ಆ ರೈತರಿಗುಂಟಾದ ಸ್ಥಿತಿಯನ್ನು ಹೇಳುವುದಕ್ಕಾಗುವದಿಲ್ಲ. ವರ್ತಕರು ಯಾರೂ ಅವರಿಗೆ ಒಂದು ಕಾಸು ಸಾಲ ಕೊಡುವುದಕ್ಕೆ ಮಾನಸ್ಸು ಮಾಡಲಿಲ್ಲ. ಆಗ ರೈತನು ತನ್ನಮನೆಯಲ್ಲಿದ್ದ ಸಾಮಾನುಗಳನ್ನು ಒಡವೆ ವಸ್ತುಗಳನ್ನು ಅರಕ್ಕೆ ಮೂರರಂತೆ ಮಾರಾಟ ಮಾಡಬೇಕಾಯಿತು. ಹೀಗಾದರೆ ಯಾರು ಉಳಿಯುತ್ತಾರೆ? ಇಂಥ ಮಸೂದೆಗಳನ್ನು ತರುವುದರಿಂದ ಸಮಾಜದಲ್ಲಿ ಒಂದು ಸುಖಮಯವಾದ ಜೀವನ ಯಾರಿಗೂ ಇರುವುದಿಲ್ಲ. ಇದ್ದ ವಿಶ್ವಾಸಗಳೂ ತಪ್ಪಿ ಎಲ್ಲ ವಾತಾವರಣವು ಬಹಳ ಕಲುಷಿತವಾಗುತ್ತದೆ. ಈ ದಿವಸ ನಾನು ಒಬ್ಬ ರೈತನ ಮಗನಾಗಿ ಮತ್ತು ಹಾಗೂ ವರ್ತಕನಾಗಿ ನನ್ನ ಅನುಭವವನ್ನು ಹೇಳುತಿದ್ದೇನೆ. ಈ ದಿವಸ ತಾವು ಯಾರು ಬೇಕಾದರೂ ಬಂದು ನಮ್ಮ ತಿಪಟೂರು ಟೌನಿನಲ್ಲಿ ಪ್ರತಿಯೊಂದು ಕೊಬ್ಬರಿ ಮತ್ತು ತೆಂಗಿನ ಕಾಯಿ ಅಂಗಡಿಗಳ ಮುಂದೆ ಸಾಲು ಸಾಲಾಗಿ ನಿಂತಿರುವ ರೈತರುಗಳನ್ನು ನೋಡಿ. ಅವರು ಎಷ್ಟು ಜನರು ಸಾಲಕ್ಕೆ ಹಾತುವರಿಯುತ್ತಿದ್ದಾರೆ. ದಿನಬೆಳಗಾದರೆ ರೈತನಿಗೆ ದುಡ್ಡಿನ ತಗಾದೆ ಇರುತ್ತದೆ.

ರೈತ ತನ್ನ ತೋಟದಲ್ಲಿ ಎಷ್ಟು ಕಾಯಿ ಬೆಳೆಯುಬಹುದು ಎಂಬುದನ್ನು ಅಂದಾಜ ಮಾಡಿಕೊಂಡು ವರ್ತಕರಲ್ಲಿ ಸಾಲ ಪಡೆದು ಆ ಕಾಯನ್ನು ಕೊಬ್ಬರಿ ಮಾಡಿ ಕಾಯಿ ಮಾರಿ ಕಡಿಮೆ ಹಣ ಸಂಪಾದನೆ ಮಾಡುವುದರ ಬದಲು ಕೊಬ್ಬರಿ ಮಾಡಿ ಮಾರಟ ಮಾಡಿ ಹೆಚ್ಚು ಲಾಭ ಪಡೆದು ವರ್ತಕರಿಗೂ ಒಂದು ಸ್ವಲ್ಪ ಹಣವನ್ನು ಬಡ್ಡಿರೂಪದಲ್ಲಿ ಕೊಡುತ್ತಾನೆ. ಇದರಲ್ಲಿ ಯಾರಿಗೂ ಅನ್ಯಾಯವಿಲ್ಲ. ಇದರಿಂದ ರೈತನ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆಯೇ ವಿನಾ ಕುಗ್ಗುವುದಿಲ್ಲ. ಈ ಒಂದು ವ್ಯವಸ್ಥೆಯನ್ನು ತಪ್ಪಿಸಿದರೆ ಮುಂದೆ ರೈತನ ಸ್ಥಿತಿ ಇನ್ನೂ ಬಹಳ ಚಿಂತಾಜನಕವಾಗುತ್ತದೆ. ಆದರೆ ರೈತರ ಅಶಕ್ತತತೆಯನ್ನು ಸದುಪಯೋಗಪಡಿಸಿಕೊಂಡು ಅವರ ಆಸ್ತಿಗಳನ್ನು ಯಾರದೋ ಹೆಸರಿಗೆ ಭೋಗ್ಯ, ಯಾರಿಂದೋ ಹೆಸರಲ್ಲಿ ಕ್ರಯ ವಗೈರೆ ಏನು ಇಂಥ ವ್ಯವಹಾರಗಳನ್ನು ಮಾಡುತ್ತಾರೆ. ಅವರನ್ನು ಶಿಕ್ಷೆಮಾಡಿ—ಅವರಿಗೆ ಸರಿಯಾದ ಕಾನೂನನ್ನು ತನ್ನಿ. ಅದನ್ನು ಮಾಡದೆ ಯಾರಿಗೋ ಕಾಯಲಿ ಅದರೆ ಯಾರಿಗೋ ಬರೆ ಎಳೆದಂತೆ ಮಾಡಬೇಡಿ ಇಲ್ಲಿ ಸರ್ಕಾರಕ್ಕೆ ಆ ರೈತನ ದಿನವಹಿ ವ್ಯವಹಾರಗಳಿಗೆ ಬೇಕಾಗುವ ಹಣವನ್ನು ಒದಗಿಸುವುದಕ್ಕೆ ಶಕ್ತಿ ಇದೆಯೇ?

ವರ್ತಕರಿಂದ ರೈತರಿಗೆ ತೊಂದರೆ ಎಂದು ಭಾವಿಸುವುದಾದರೆ ರೈತರ ರಕ್ಷಣೆ ಮಾಡುವ ಸರಕಾರ ಅವರಿಗೆ ಸಾಲ ಕೊಡಲು, ಸಾಲ ದೊರೆಯುವಂತೆ ಮಾಡಲು ಏನು ಏರ್ಪಾಡು ಮಾಡುವುದು? ಈ ವ್ಯವಹಾರ ನಿಮ್ಮ ಕಾಲದಲ್ಲಿ ಬಂದಿಲ್ಲ, ಇದು ಅನೂಚಾನವಾಗಿ ಬಂದಿದೆ, ಪ್ರಪಂಚ ಹುಟ್ಟಿದಾಗಿನಿಂದ ಬಂದಿದೆ. ಇದು ಗಂಭೀರವಾದ ಪ್ರಶ್ನೆ. ಅನೇಕ ಸಣ್ಣಪುಟ್ಟ ವರ್ತಕರು ಇದರಿಂದ ಜೀವನ ಮಾಡುತ್ತಿದ್ದಾರೆ. ರೈತರಿಗೆ ಅವರು ಹಣ ಕೊಟ್ಟು ಸುಗ್ಗಿಕಾಲದಲ್ಲಿ ಅದು ವಾಪಸು ಬರುವುದೆಂದು ನಿರೀಕ್ಷೆಮಾಡುವರು. ವರ್ತಕರು ಅನೇಕರು ಮುಲ್ತಾನಿಗಳ ಹತ್ತಿರ ತಂದು ಮೂರು ತಿಂಗಳಲ್ಲಿ ವಾಪಸು ಕೊಡುವ ಪದ್ಧತಿಯಿದೆ. ವರ್ತಕರು ಅಷ್ಟು ಬೇಗ ಕೊಟ್ಟರೂ ರೈತ ವರ್ತಕರಿಗೆ ಸಾಲ ತೆಗೆದುಕೊಂಡಿರುವುದನ್ನು ಮೂರು ನಾಲ್ಕು ವರ್ಷಗಳಲ್ಲಿ ಕೊಡಬಹುದು. ಈ ವ್ಯವಹಾರದಲ್ಲಿ ರಿಸ್ಕ ತೆಗೆದುಕೊಂಡು ವರ್ತಕರು ಸಾಲ ರೈತರಿಗೆ ಕೊಡುತ್ತಿದ್ದಾರೆ. ಅನೇಕ ದೊಡ್ಡ ರೈತರಿದ್ದಾರೆ. ಯಾವ ರೈತರಿಗೆ ಒಂದು ವರ್ಷಕ್ಕೆ ೨ ಸಾವಿರ ರೂಪಾಯಿಗಳಿಗಿಂತ ಅಧಿಕ ವರಮಾನವಿದೆ ಅವರಿಗೆ ಇದರ ವಿನಾಯಿತಿ ಸಿಕ್ಕದ ರೀತಿ ಮಾಡಬೇಕು ಎಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಮಾಜದಲ್ಲಿ ನಡೆಯುವ ವ್ಯವಹಾರಗಳಿಗೆ ಸರಕಾರ ತಡೆಮಾಡಿದರೆ ರೈತರ ಶೋಷಣೆ ಸರಕಾರದಿಂದ ಆಗುವುದು, ರೈತರಿಂದಾಗುವುದಿಲ್ಲ.

3–00 P. M.

ಈ ಕಾನೂನು ಈಗಿರುವಹಾಗೆ ಅಂದರೆ ರೈತರಿಗೆ ಹಣದ ಸೌಲಭ್ಯ ಕಡಮೆ ಯಾಗುವುದು. ಆದುದರಿಂದ ರೈತರಿಗೆ ಮತ್ತು ಸಣ್ಣ ವರ್ತಕರಿಗೆ ತೊಂದರೆ ಯಾಗದಂತೆ ತಿದ್ದುಪಡಿ ಮಾಡಬೇಕು. ಈಗ ರೈತರು ಮತ್ತು ವ್ಯವಹಾರ ಮಾಡುವ ವರಲ್ಲಿ ಸುಮಧುರ ಬಾಂಧವ್ಯ ಇದೆ. ತಿಪಟೂರಿನಲ್ಲಿ ಈಗ ನಡೆಯುವ ವ್ಯವಹಾರ

ನೋಡಬಹುದು. ೧೦-೧೨ ವರ್ಷದಿಂದ ಬಾಕಿ ಇದ್ದರೂ ಕೋರ್ಟಿಗೆ ಹೋಗಿಲ್ಲ, ಇಂಥ ಸಂದರ್ಭಗಳಿವೆ. ಕಾನೂನಿನ ಪ್ರಕಾರ ಅವಕಾಶವಿದ್ದರೂ ಹೋಗಿಲ್ಲ. ತೆಗೆದುಕೊಳ್ಳುವ ರೈತ ಮತ್ತು ಕೊಡುವ ವರ್ತಕ ಇವರ ಬಾಂಧವ್ಯಕ್ಕೆ ಚ್ಯುತಿ ಬಂದಾಗ ನಿಮಗೆ ಅವರ ಶಾಪ ತಟ್ಟುವುದು. ರೈತರ ರಕ್ಷಣೆ ಮಾಡಲು ಸರಕಾರಕ್ಕೆ ಶಕ್ತಿಯಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲ ವರ್ಗಗಳಿಗೂ ರಕ್ಷಣೆ ಇರಬೇಕು. ನಿಮ್ಮ ಖಜಾನೆಯನ್ನು ಈ ದಿವಸ ತುಂಬುವವರು ಯಾರು? ಸೇಲ್ಸ್‌ಟ್ಯಾಕ್ಸ್ ಮತ್ತು ಇನಕಮ್‌ಟ್ಯಾಕ್ಸ್ ಕೊಡುವವರು. ಅವರಿಲ್ಲದಿದ್ದರೆ ಕಷ್ಟವಾಗುವುದು. ವರ್ತಕರು ಅದನ್ನು ಕೊಡುವರೇ ಹೊರತು ರೈತರು ಕೊಡುವದಿಲ್ಲ. ಇಪ್ಪತ್ತು ವರ್ಷದಿಂದ ರೈತ ಬಡ್ಡಿ ಕೊಟ್ಟಿರುತ್ತಾನೆ, ಅವನಿಗೆ ರಿಯಾಯಿತಿ ಬೇಕು ಎಂದು ಹೇಳುವರು. ಆದರೆ ರೈತನಿಗೆ ಈ ರಿಯಾಯಿತಿ ತೋರಿಸಿದರೆ ತೆರಿಗೆ ಕೊಟ್ಟಿರುವ ವರ್ತಕ ದಿವಾಳಿಯಾಗುವುದಿಲ್ಲವೇ? ಇದನ್ನು ಯೋಚನೆಮಾಡಬೇಕು. ನಾನು ಎರಡೂ ಕಡೆ ನೋಡಿದ್ದೇನೆ. ನಿಮ್ಮ ಕಾನೂನು ಬಂದರೂ ರೈತರಿಗೆ ಕೊಡುವ ಹಣ ನಿಲ್ಲಿಸಿಲ್ಲ. ಆದರೆ ಪದೇಪದೇ ಅದು ಬಂದಾಗ ಮನಸ್ಸಿನಮೇಲೆ ಬಹಳ ಪರಿಣಾಮವಾಗುವುದು. ಹಿಂದೆ ಈ ಸಂಬಂಧವಾದ ಕಾನೂನು ಬಂದಾಗ ರೈತರಿಗೆ ದಿಗಭ್ರಾಂತಿ ಆಯಿತು, ವರ್ತಕರಲ್ಲಿ ಕಳವಳ ವುಂಟಾಯಿತು. ಆಗ ಹೈಕೋರ್ಟು ಸ್ಟೇ ಕೊಟ್ಟಿತು. ಈಗ ರೈತರೂ ಮತ್ತು ವರ್ತಕರೂ ಒಂದಾಗಿ ವ್ಯವಹಾರ ಮಾಡುತ್ತಿದ್ದಾರೆ. ಆದುದರಿಂದ ಕಳಕಳಿಯಿಂದ ಹೇಳುವುದು ಒಂದೇ ದೃಷ್ಟಿ ಬೇಡ, ರೈತರ ಏಳಿಗೆ ಮಾಡಿ ಇನ್ನೊಬ್ಬರ ತಲೆ ಒಡೆಯುವುದು ಬೇಡ. ಈ ಎರಡು ವರ್ಗಗಳೂ ಸಮಾಜದಲ್ಲಿರಬೇಕು. ಒಂದು ಕಟ್ಟುಪಾಡು ಮಾಡಿ ಇಷ್ಟು ಬಡ್ಡಿ ರೈತರಿಂದ ತೆಗೆದುಕೊಳ್ಳಬೇಕು ಇಷ್ಟು ದಳ್ಳಾಳಿ ತೆಗೆದುಕೊಳ್ಳಬೇಕು ಎಂದು ಬೇಕಾದರೆ ಮಾಡಿ. ಮತ್ತೊಂದು ೨ ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟ ವರಮಾನವಿರುವವರಿಗೆ ಈ ಕಾನೂನು ಅನ್ವಯವಾಗಬಾರದು. ಇದಕ್ಕೆ ಅವಕಾಶಮಾಡಿ ಕಾಯಿದೆ ತರುತ್ತೀರಿ ಎಂದು ನಂಬಿ ಹಾಗೆ ಮಾಡಬೇಕೆಂದು ಸಲಹೆಮಾಡಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಈಗ ಮೈಸೂರ ಅಗ್ರಿಕಲ್ಚರಲ್ ಡೆಬ್‌ಟರ್ಸ್ (ಟೆಂಪೊರರಿ ಪ್ರೊಟೆಕಷನ್) ಬಿಲ್ಲನ್ನು ನಮ್ಮ ಮುಂದೆ ಇಡಲಾಗಿದೆ. ಹೈಕೋರ್ಟಿನಲ್ಲಿ ಅಗ್ರಿಕಲ್ಚರಲ್ ಡೆಬ್‌ಟರ್ಸ್ ರಿಲೀಫ ಆ್ಯಕ್ಟ ಕ್ರಮಬದ್ಧವಾಗಿಲ್ಲ ಎಂದು ತಳ್ಳಿಹಾಕಿರುವುದರಿಂದ ಸುಪ್ರೀಂಕೋರ್ಟು ತೀರ್ಮಾನವಾಗದಿರುವುದರಿಂದ ತಾತ್ಕಾಲಿಕವಾಗಿ ತಂದಿರುವ ಮಸೂದೆ ಇದು ಎಂದು ಹೇಳಿದ್ದಾರೆ. ಅನೇಕ ರೈತರು ಸಾಲ ತೆಗೆದುಕೊಂಡು ಹಾಳಾಗಿರುವುದೂ ಮತ್ತು ಅನೇಕರು ಸಾಲ ಕೊಡುವವರು ರೈತರನ್ನು ಶೋಷಣೆ ಮಾಡಿ ಹೆಚ್ಚಿನ ಲಾಭ ಪಡೆದು ಕೊನೆಗೆ ರೈತರ ಜಮೀನನ್ನು ತಮ್ಮ ಸ್ವಾಧೀನ ಮಾಡಿಕೊಂಡಿರುವುದೂ ಇದೆ. ಇಂಥ ಸಂದರ್ಭಗಳು ಬೇಕಾದಷ್ಟಿವೆ. ಸಾಲ ಕೊಡುವವರ ಹಾವಳಿಯಿಂದ ಅನೇಕ ರೈತರ ಮನೆಗಳು ಹಾಳಾಗಿವೆ. ಆದರೂ

ಕೂಡ ರೈತರು ತಾವು ಹೇಳುವಷ್ಟು ತಿಳಿವಳಿಕೆ ಇಲ್ಲದವರಲ್ಲ. ನಾನು ಈ ವ್ಯವಹಾರದಲ್ಲಿ ಸುತ್ತಿಕೊಂಡಿದ್ದೇನೆ. ಸಾಕ್ಷ್ಯದು ರೈತರಿಗೆ ಸಾಲ ಕೊಟ್ಟಿರುವಾಗ ಆ ಸಾಲದ ಪತ್ರಗಳನ್ನು ಹರಿದು ಹಾಕಬೇಕೆಂದು ನಾನು ಯೋಚನೆಮಾಡಿದ್ದೆ. ಆ ಪತ್ರಕ್ಕೆ ಹೇಳಿಕಳಿಸಿದ್ದೆ, ಅವು ಬಂದಿಲ್ಲ. ಅದು ಬರುವುದಿಲ್ಲವೆಂದು ಖಚಿತವಾಗಿದೆ. ಅವರು ಕೊಡುವ ಬಡ್ಡಿಗೂ ನಾನು ಓಡಾಡಲು ಮಾಡುವ ಖರ್ಚಿಗೂ ಸರಿ ಹೋಗುವುದು. ಅನೇಕ ಸಂದರ್ಭಗಳಲ್ಲಿ ರೈತರಿಗೆ ಕೊಟ್ಟ ಸಾಲ ಬರುವುದು ಕಷ್ಟ ಎಂದು ಅನುಭವದಿಂದ ಹೇಳುತ್ತೇನೆ. ಈಗ ಅನೇಕ ಬಿಲ್ಲುಗಳು ಬರುತ್ತಿವೆ, ಲಾ ಇಲಾಖೆ ಯೋಚನೆ ಮಾಡುವುದಕ್ಕೆ ಸಹ ಅವಕಾಶ ಕೊಡುವರೋ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ಇದರಿಂದ ಬಿಲ್ಲುಗಳಲ್ಲಿ ಅನೇಕ ನ್ಯೂನತೆಗಳಿರಲು ಅವಕಾಶವಾಗಿದೆ. ಇದು ಕೋರ್ಟುಗಳಲ್ಲಿ ಅನೇಕ ಆಕ್ಟುಗಳನ್ನು ತಳ್ಳಿಹಾಕುವುದಕ್ಕೆ ಅವಕಾಶ ಕೊಟ್ಟಿದೆ. ಇದರಿಂದ ವರ್ಷೇವರ್ಷೆ ತಿದ್ದುಪಡಿಗಳನ್ನು ತರುವುದಕ್ಕೆ ಬದಲಾಗಿ ಆಗಾಗ್ಯೆ ಅನೇಕ ಮಾರ್ಪಾಡಾಗುತ್ತಿರುವುದರಿಂದ, ಈಗ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಬದಲಾವಣೆಯಾಗುತ್ತಿರುವುದರಿಂದ ತಿದ್ದುಪಡಿ ತರುವಾಗ ಸಮಗ್ರವಾದ ತಿದ್ದುಪಡಿ ತಂದರೆ ಹೊಸ ಆಕ್ಟ ತಂದರೆ ಹೆಚ್ಚು ತೊಂದರೆಯಾಗುವುದಿಲ್ಲ ಮತ್ತು ಆಗಾಗ್ಯೆ ತಿದ್ದುಪಡಿ ತರಬೇಕಾದ ಅಗತ್ಯವಿರುವುದಿಲ್ಲ ಎಂದು ಸಲಹೆಮಾಡುತ್ತೇನೆ.

(*Mr. Deputy Speaker in the chair*)

ಇಲ್ಲಿರತಕ್ಕದ್ದರಲ್ಲಿ ಕ್ಲಾಸ್ ಎರಡರಲ್ಲಿ "debt" means any liability in cash or kind, whether secured or unsecured, due from a debtor, whether payable under a decree or order of any civil court or otherwise, ಎಂದು ಇದೆ. ನಮ್ಮ ಮಾನ್ಯ ಸದಸ್ಯರು ಆದ ಶ್ರೀಮಾನ್ ಮಂಜುನಾಥ ಅವರು ಹೇಳಿದ್ದನ್ನು ನಾನು ಸ್ವಲ್ಪ ಒಪ್ಪಬೇಕಾಗುತ್ತದೆ. ಏಕೆಂದರೆ ತಾವು ತಂದಿರತಕ್ಕ ಲ್ಯಾಂಡ ರಿಫಾರಮ್ಸ ಬಿಲ್ಲಿನಲ್ಲಾಗಲೀ, ಅಥವಾ ಇರತಕ್ಕಂಥ ಡೆಟ್ ರಿಲೀಫ್ ಬಿಲ್ಲಿನಲ್ಲಾಗಲೀ ರೈತನಿಗೆ ತೆಗೆದುಕೊಳ್ಳಬೇಕಾದ ಸಾಲ ಬರೀ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕುಗಳಿಂದಾಗಲೀ, ಕೋ-ಆಪರೇಟಿವ್ ಇನ್ಸ್ಟಿಟ್ಯೂಷನ್‌ಗಳಿಂದಾಗಲೀ ಅಥವಾ ಗವರ್ನಮೆಂಟಿನಿಂದ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ರೈತನಿಗೆ ಇನ್ನುಮೇಲೆ ಸಾಲ ಹುಟ್ಟತಕ್ಕದ್ದು ಕಷ್ಟ ಎನ್ನುವುದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ರೈತ ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ, ಪ್ರೊಡಕ್ಟೀವ್ ಪರ್ಪಸ್‌ಗೆ ಮತ್ತು ಅನೇಕ ವೇಳೆ ನಾನ್ ಪ್ರೊಡಕ್ಟೀವ್ ಪರ್ಪಸ್‌ಗೂ ತೆಗೆದುಕೊಳ್ಳಬೇಕಾಗುತ್ತದೆ. ರೈತನಿಗೆ ಸಾಲಕೊಡತಕ್ಕವರು ಬಡ್ಡಿ ತೆಗೆದುಕೊಳ್ಳುವ ರೂಪದಲ್ಲಿ ಇವರನ್ನು ಶೋಷಣೆ ಮಾಡುತ್ತಾರೆ ಎನ್ನುವುದನ್ನು ಒಪ್ಪುವುದಾದರೂ ಸಹ, ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಿಂದಾಗಲೀ ಬೇರೆ ಯಾವ ಕೋ-ಆಪರೇಟಿವ್ ಇನ್ಸ್ಟಿಟ್ಯೂಷನ್ಸ್

ನಿಂದಾಗಲೀ ತೆಗೆದುಕೊಳ್ಳುವಾಗ ಲಂಚ ರುಷುವತ್ತುಗಳನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅವನಿಗೆ ಸಾಲ ಸಿಕ್ಕುವುದು ಕಷ್ಟವಾಗುತ್ತದೆ; ಎನ್ನುವುದನ್ನು ಈ ಸಂದರ್ಭ ದಲ್ಲಿ ಯಾರೂ ಮರೆಯಬಾರದು.

ಶ್ರೀ ಎಚ್. ಡಿ. ದೇವೇಗೌಡ.— ತಮಗೆ ಅದು ಅನುಭವ ಇದೆಯೇ ?

ಶ್ರೀ ಟಿ. ಆರ್. ಶಾಮಣ್ಣ.— ಕೆಲವು ಸಂದರ್ಭದಲ್ಲಿ ಲಂಚವನ್ನು ಕೊಟ್ಟೇ ಕೊಡಬೇಕಾಗುತ್ತದೆ. ಕೆಲವು ಡೈರೆಕ್ಟರಗಳನ್ನು ವಿಚಾರಿಸಿಕೊಳ್ಳದಿದ್ದರೆ ಸಾಲ ಸುಲಭವಾಗಿ ಸಿಕ್ಕುವುದಿಲ್ಲ. ಸಹಕಾರ ಸಂಘಗಳು ಸಾಲ ಕೊಡಬೇಕಾದಾಗ, ಯಾರು ಕಡುಬಡವರು ಇದ್ದಾರೆ ಅಂಥವರಿಗೆ ಸುಲಭ ರೀತಿಯಲ್ಲಿ ಸಾಲ ಸಿಕ್ಕುವಂತೆ ಮಾಡ ಬೇಕು. ಯಾರಿಗೆ ಇದಕ್ಕಾಗಿ ಹಣವನ್ನು ಖರ್ಚು ಮಾಡತಕ್ಕ ಶಕ್ತಿ ಇದೆ, ಅಂಥವ ರಿಗೆ ಈಗ ಇರತಕ್ಕದ್ದರಲ್ಲಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅನೇಕ ಸೊಸೈಟಿಗಳಲ್ಲಿ ಡಿಫಾಲ್ಟರ್ಸ್ ಇರುತ್ತಾರೆ. ಅಂಥ ಸಂದರ್ಭದಲ್ಲಿ ಸೊಸೈಟಿಗಳಿಗೆ ಹಣ ಸರಿಯಾಗಿ ವಸೂಲಿಯಾಗುತ್ತಿರುವುದಿಲ್ಲ. ಆಗ ಅವರು ಸಾಲ ವಸೂಲಿಯಾಗಿಲ್ಲ, ಆದ್ದರಿಂದ ಮತ್ತೆ ಸಾಲಕೊಡಲಿಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಸರಿಯಾಗಿ ಕಂತುಗಳನ್ನು ಕಟ್ಟುವವರಿಗೂ ಸಾಲ ಸಿಕ್ಕದೆ ಇರುವ ಸಂದರ್ಭಗಳು ಇವೆ. ರೈತರಿಗೆ ಯಾವ ರೀತಿ ಅನುಕೂಲವನ್ನು ಮಾಡಿಕೊಡಬೇಕು ಎನ್ನುವುದರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈ ಬಿಲ್ಲಿನಲ್ಲಿ ಕೋರ್ಟಿನಲ್ಲಿರತಕ್ಕ ಕೇಸಗಳಿಗೆ ಅಪೀಲು ಹೋಗಿ ತೀರ್ಮಾನವಾಗುವುದು ತಡವಾಗುತ್ತದೆ. ಇದುವರೆಗೂ ಕೋರ್ಟು ಯಾವುದಾದರೂ ಒಂದು ವ್ಯವಹಾರ ಮಾಡಿ ಡಿಕ್ರಿಗಳನ್ನು ತೆಗೆದುಕೊಂಡು ಬಂದು ಅಟ್ಯಾಚ್‌ಮೆಂಟ್ ಮಾಡಿ ಸ್ಟೇ ತೆಗೆದುಕೊಂಡು ಬಂದಿರತಕ್ಕದ್ದೇ ಕಾರಣ. ಆದ್ದ ರಿಂದ ಇದನ್ನು ಇಲ್ಲಿ ಚರ್ಚೆಮಾಡಬೇಕಾದ ಅವಶ್ಯಕ ಕಾಣುವುದಿಲ್ಲ. ಆದರೂ ಕೂಡ ಒಂದು ವಿಚಾರ, ಶ್ರೀ ಮಂಜುನಾಥ ಅವರು ಮಾತನಾಡಿದ್ದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ರೈತರಿಗೆ ಹೊಸ ಹೊಸ ಬಿಲ್ಲುಗಳನ್ನು ತರುವುದರಿಂದ ಅನುಕೂಲ ಮಾಡುವುದರ ಜೊತೆಗೆ ಅನಾನುಕೂಲವನ್ನೂ ಮಾಡುತ್ತಿದ್ದೇವೆ. ರೈತರಿಗೆ ಇರ ತಕ್ಕಂಥ ಭೂಮಿಯನ್ನು, ಸ್ಥಿರ ಆಸ್ತಿಗಳನ್ನು ಪರಭಾರೆ ಮಾಡುವುದರ ಜೊತೆಗೆ ಮನೆ ಯಲ್ಲಿರುವ ಪಾತ್ರೆಪಡುಗಳನ್ನು ಮಾರಿಕೊಳ್ಳುವ ಸಂದರ್ಭಗಳು ಬರುತ್ತದೆ. ಆದ್ದ ರಿಂದ ರೈತರಿಗೆ ಬೇರೆ ರೀತಿಯಲ್ಲಿ, ಅವನಿಗೆ ಬೇಕಾದ ಸೌಲಭ್ಯಗಳನ್ನು ವ್ಯವಸ್ಥೆಮಾಡಿ ಕೊಡದೆ ಹೋದ ಪಕ್ಷದಲ್ಲಿ ಅವನಿಗೆ ಸಾಲ ಸಿಕ್ಕುವುದು ಬಹಳ ಕಷ್ಟವಾಗುತ್ತದೆ. ಡೆಟ್ಟು ರಿಲೀಫ್ ಆಕ್ಟಿನಲ್ಲಿ ತರುವಾಗ ಹಳ್ಳಿಯಲ್ಲಿರುವ ರೈತನ ಪರಿಸ್ಥಿತಿಯನ್ನು ನಾವು ಗಮನಕ್ಕೆ ತೆಗೆದುಕೊಂಡು ಆಕ್ಟನ್ನು ತರಬೇಕು. ಇಲ್ಲದಿದ್ದರೆ, ಅವನಿಗೆ ಉಪಕಾರ ಮಾಡದೆ ಅಪಕಾರ ಮಾಡಿದಂತಾಗುತ್ತದೆ. ಇದರ ಬಗ್ಗೆ ನಾನು ಒಂದು ಅಮೆಂಡ್ ಮೆಂಟ್ ತರುವವನಿದ್ದೇನೆ, ಆ ಸಂದರ್ಭದಲ್ಲಿ ನನಗೆ ಹೆಚ್ಚು ಮಾತನಾಡಲು ಅವಕಾಶ ಕೊಡಬೇಕು ಎಂದು ಕೇಳಿಕೊಂಡು, ಈ ಬಿಲ್ಲಿನ ಬಗ್ಗೆ ನನ್ನ ವಿರೋಧವಿಲ್ಲ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ).— ಅಧ್ಯಕ್ಷರೇ, ಮೈಸೂರು ಅಗ್ರಿಕಲ್ಚರ್ ಡೆಬ್ಟರ್ಸ್ (ಟೆಂಪರರಿ ಪ್ರೊಟೆಕ್ಷನ್) ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಸರ್ಕಾರ ಒಂದೆ ಇಂಥಾದ್ದೆ ಕಾನೂನನ್ನು ತಂದಾಗ ಕೋರ್ಟಿನವರೆಗೆ ಹೋಗಿ ಸ್ಟೇ ಆಗಿರುವುದು ಎಲ್ಲರಿಗೂ ಗೊತ್ತಿದೆ. ಇವತ್ತು ರೈತರಿಗೆ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಯಾವ ಒಂದು ಅನುಕೂಲವಾಗಲೀ ಯಾವ ಒಂದು ಪ್ರೊಟೆಕ್ಷನ್ ಆಗಲೀ ಇಲ್ಲದೆ ಇರುವುದರಿಂದ ಈ ಬಿಲ್ಲನ್ನು ತಂದಿದ್ದಾರೆ. ಈ ಬಿಲ್ಲಿನ ಮೇಲೆ ಮಾತನಾಡಿದಂಥ ಕೆಲವು ಮಿತ್ರರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಮುಖ್ಯವಾಗಿ ಮಂಜುನಾಥ ಅವರು ಮಾತನಾಡುತ್ತಾ ವ್ಯಾಪಾರಸ್ಥರು ಮತ್ತು ಲೇವಾದೇವಿ ಮಾಡುವವರನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದಾರೆ. ಇವತ್ತಿನ ದಿವಸ ನಾನು ಅವರಿಗೆ ಒಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ವ್ಯಾಪಾರಸ್ಥರು, ಲೇವಾದೇವಿ ಮಾಡುವವರು, ಅವರು ಹಣವನ್ನು ಬಡ್ಡಿಗೆ ಕೊಡಬೇಕಾದರೆ, ಅವರಿಗೆ ಹಣ ಎಲ್ಲಿಂದ ಬಂತು ? ಅವರು ದೇಶಕ್ಕೆ ಸಂಪತ್ತನ್ನು ಉತ್ಪತ್ತಿ ಮಾಡುತ್ತಾರೆಯೇ ? ೧೦೦ಕ್ಕೆ ೩೬ ರೂಪಾಯಿಗಳ ಬಡ್ಡಿಯನ್ನು ಕೊಡುವ ಪರಿಸ್ಥಿತಿ ನಮ್ಮ ದೇಶದಲ್ಲಿ ನಡೆಯುತ್ತಿದೆ. ಇದು ಯಥಾಪ್ರಕಾರ ನಡೆದು, ಇವತ್ತಿನ ದಿವಸ ಶಾಮಣ್ಣನವರು ಹೇಳಿದ ಹಾಗೆ ಅನೇಕರು ಮನೆ ಮಠಗಳನ್ನು ಕಳೆದುಕೊಂಡು ಬೀದಿ ಭಿಕಾರಿಗಳಾಗಿದ್ದಾರೆ. ಅಂಥವರಿಗೆ ಪ್ರೊಟೆಕ್ಷನ್ ಕೊಡುವುದಾದರೆ ಸರಿ. ಸಂಪತ್ತನ್ನು ಉತ್ಪತ್ತಿ ಮಾಡುವುದರಲ್ಲಿ ಭಾಗವಹಿಸದೆ, ಕಿರುಕುಳ ಕೊಟ್ಟು ಜನರ ಶೋಷಣೆ ಮಾಡಿ ಅವರ ಆಸ್ತಿಯನ್ನು ವಶಪಡಿಸಿಕೊಂಡು ದೇಶಕ್ಕೆ ಕಂಟಕರಾಗಿರತಕ್ಕವರ ವಿಚಾರದಲ್ಲಿ ಈ ಸಭೆಯಾಗಲೀ, ಯಾರೇ ಆಗಲೀ ಅನುಕರಣೆಯನ್ನು ತೋರಿಸಬೇಕಾದುದು ಏನೂ ಇಲ್ಲ. ಈಗಾಗಲೇ ಅಂಥವರಿಂದ ಸಾಕಷ್ಟು ಅನಾಹುತವಾಗಿದೆ, ಸಾಮಾನ್ಯ ಜನತೆಗೆ, ಕೂಲಿ ಮಾಡತಕ್ಕವರಿಗೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಮಧ್ಯಮ ವರ್ಗದವರಿಗೆ, ಸಣ್ಣ ಪುಟ್ಟ ರೈತರಿಗೆ ಇಷ್ಟು ತೊಂದರೆ ಬಂದು ಹಾಳಾಗುವುದಕ್ಕೆ ಇದೂ ಒಂದು ಕಾರಣ. ಆದ್ದರಿಂದ ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಅದೇ ರೀತಿಯಲ್ಲಿ ಅಗ್ರಿಕಲ್ಚರಲ್ ಡೆಬ್ಟ್ ರಿಲೀಫ್ ಆಕ್ಟ್ ಜಾರಿಗೆ ಬಂದಾಗ ವ್ಯಾಪಾರಸ್ಥರು ರೈತರಿಗೆ ಹಣ ಕೊಡಲಿಲ್ಲ ಎನ್ನುವುದು ನಿಜ. ಇದನ್ನು ಸರಕಾರ ಹೆಚ್ಚಿನ ಪರಿಣಾಮಕಾರಿಯಾದ ರೀತಿಯಲ್ಲಿ ಎದುರಿಸಿ ಹೆಚ್ಚಿನ ಸಹಾಯವನ್ನು ಅವರಿಗೆ ಮಾಡಬೇಕು. ಏಕೆಂದರೆ ಸಾಲ ಎಲ್ಲಿಯೂ ಸಿಕ್ಕುವುದಿಲ್ಲ, ಸರ್ಕಾರದಲ್ಲಿಯೂ ಸಾಲ ಸಿಕ್ಕುವುದಿಲ್ಲ ಎಂದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ಸಹಕಾರ ಸಂಘಗಳು ಇವರಿಗೆ ಬೇಕಾದಷ್ಟು ಹಣವನ್ನು ಕೊಡುತ್ತಿವೆ ಎಂದು ಹೇಳಬಹುದು. ಆದರೆ ಸಹಕಾರ ಸಂಘಗಳಿಂದ ಹಣ ತೆಗೆದುಕೊಳ್ಳುವುದು ಹೆಚ್ಚಿನ ಪರಿಶ್ರಮವಾಗುತ್ತದೆ. ಇದನ್ನು ನಾನು ಸ್ವತಃ ಅನುಭವಿಸಿದ್ದೇನೆ. ಕೆಲವು ಸಂದರ್ಭಗಳಲ್ಲಿ ಕೆಲವು ಸಹಕಾರ ಸಂಘಗಳು ನ್ಯಾಯವಾದ ನಡವಳಿಕೆಯನ್ನು ಇಟ್ಟುಕೊಂಡು, ನ್ಯಾಯವಾದ ವ್ಯವಹಾರವನ್ನು ನಡೆಸುತ್ತಾ ಇರಬಹುದು. ಸಾಮಾನ್ಯಜನಕ್ಕೆ ಪ್ರಯೋಜನವಾಗುವ ರೀತಿಯಲ್ಲಿ ಹೆಚ್ಚು ಸಹ

ಕಾರ ಸಂಘಗಳು ನಡೆಯುತ್ತಾ ಇಲ್ಲ. ಬ್ಯಾಂಕುಗಳನ್ನು ನ್ಯಾಷನಲೈಸ್ ಮಾಡಿದ್ದೇವೆ ಎಂದು ಸರ್ಕಾರದವರು ಹೇಳಬಹುದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಸಿಕ್ಕುತ್ತದೆ. ಇದರಿಂದ ಪ್ರಯೋಜನ ಪಡೆಯಬಹುದು ಎಂದು ನೀವು ಹೇಳಬಹುದು. ಆದರೆ ಇವತ್ತು ನಾನು ಸರ್ಕಾರಕ್ಕೆ ಈ ಬಗ್ಗೆ ನಾನು ಒಂದು ಸವಾಲನ್ನು ಹಾಕುತ್ತೇನೆ. ಹರಕು ಮುರಕು ಚಡ್ಡಿ ಹಾಕಿಕೊಂಡಿರತಕ್ಕ ರೈತನನ್ನು ಏನಾದರೂ ಈ ರಾಷ್ಟ್ರೀಕೃತ ಬ್ಯಾಂಕುಗಳು ಎಲ್ಲಿವೆ ಎಂದು ಹೇಳಿದರೆ ೧೦೦ಕ್ಕೆ ೯೯ ಜನಕ್ಕೆ ಇದು ಗೊತ್ತಿರುವುದಿಲ್ಲ ಇಂಥ ಬ್ಯಾಂಕಿನ ಮೆಟ್ಟಿಲನ್ನು ಯಾವ ಒಬ್ಬ ರೈತನೂ ತುಳಿದುಬಂದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳೂ ಕೂಡ ಇವತ್ತಿನ ದಿವಸ ಈ ಒಂದು ವರ್ಗದ ಜನಕ್ಕೆ ಅನುಕೂಲವಾಗತಕ್ಕ ಪರಿಸ್ಥಿತಿಗೆ ತಮ್ಮ ರೂಲ್ಸಗಳನ್ನು ಬದಲಾವಣೆ ಮಾಡಿಲ್ಲ.

ಇವತ್ತು ಕೂಡ ದೊಡ್ಡ ದೊಡ್ಡ ಬಂಡವಾಳಶಾಹಿಗಳ ಹಿತದೃಷ್ಟಿಯನ್ನು ಕಾಪಾಡುವಂಥ ಪಕ್ಷಗಳು ಇವೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರಿಗೆ ಆಗಲೀ, ಸಾಮಾನ್ಯ ಜನಕ್ಕೆ ಆಗಲೀ ಇವತ್ತು ಹಣ ಸಿಕ್ಕುವುದಿಲ್ಲ. ಸರ್ಕಾರದವರು ಇದನ್ನು ಸರಿಪಡಿಸಬೇಕು ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಸುಪ್ರಿಂ ಕೋರ್ಟಿನಲ್ಲಿ ಸೀನಿಯಾರಿಟಿ ಬಿಟ್ಟು ಚೀಫ್ ಜಸ್ಟೀಸ್ ಅಪಾಯಿಂಟ್ ಮಾಡಿದರು ಎಂದು ಭಾರತದೇಶದಲ್ಲೆಲ್ಲಾ ದೊಡ್ಡ ಅಲ್ಲೋಲ ಕಲ್ಲೋಲ ಎದ್ದಿದೆ. ಸುಪ್ರೀಂ ಕೊರ್ಟಿನಲ್ಲಿ ವರ್ಷಾನುಗಟ್ಟಲೆಯಾದರೂ ಕೂಡ ಕೇಸುಗಳು ಇತ್ಯರ್ಥವಾಗದೇ ರೈತರ ಹಿತದೃಷ್ಟಿಯನ್ನು ಕಾಪಾಡುತ್ತಿಲ್ಲ. ಜಡ್ಜರೂ ಕೂಡ ಮನುಷ್ಯರೇ ಅವರು ಸೂಪರ್ ಹ್ಯೂಮನ್ ಬೀಯಿಂಗ್ಸ್ ಅಲ್ಲ ಎಷ್ಟು ವರ್ಷ ಆದರೂ ಕೂಡ ಕೋರ್ಟಿನಲ್ಲಿ ಕೇಸುಗಳು ತೀರ್ಮಾನ ವಾಗುವುದಕ್ಕೆ ವ್ಯವಧಾನವಿಲ್ಲ. ಸರ್ಕಾರದವರು ಮಾಡಿರತಕ್ಕ ರೀತಿ ನೀತಿ ಸಮರ್ಪಕವಾಗಿದೆಯೋ. ಸಮಾಜದಲ್ಲಿರುವ ದುರ್ಬಲ ವರ್ಗದವರು ಕೋರ್ಟುಗಳಿಗೆ ಹೋದಾಗ ಕಾನೂನುಗಳನ್ನು ಯಾವ ದೃಷ್ಟಿಯಿಂದ ಮಾಡಿದ್ದಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಅಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಅಧ್ಯಕ್ಷರೇ ಇಲ್ಲಿ ಒಂದು ವಿಶೇಷ ಸಂದರ್ಭದಲ್ಲಿ ಉಂಟಾಗಿರತಕ್ಕ ಪರಿಸ್ಥಿತಿಯಲ್ಲಿ, ವ್ಯವಸಾಯಗಾರರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಸರ್ಕಾರದವರ ಮಸೂದೆಯನ್ನು ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಆದರೆ ಈ ಒಂದು ಮಸೂದೆಯನ್ನು ತರುವುದರ ಮುಖೇನ ವ್ಯವಸಾಯಗಾರನಿಗೆ ತಾವು ಕೊಡಬೇಕಾದಂಥ ಎಲ್ಲಾ ರಕ್ಷಣೆಯನ್ನೂ ಇದರಿಂದ ಕೊಡಲಿಲ್ಲ ಎಂದು ನನ್ನ ವಾದ.

ಹಿಂದೆ ಹಳೇ ಮೈಸೂರಿನಲ್ಲಿ ಅಗ್ರಿಕಲ್ಚರಲ್ ರಿಲಿಫ್ ಆಕ್ಟ್ ಏನು ಇತ್ತು ಅದರ ಪ್ರಕಾರ ೧೦೦೦ ರೂಪಾಯಿಗಿಂತ ಕಡಿಮೆ ಆದಾಯ ಬರತಕ್ಕ ಎಲ್ಲಾ ವ್ಯವಸಾಯಗಾರರಿಗೂ ವಿಶೇಷವಾದ ಸವಲತ್ತು ಇತ್ತು. ಆತನ ಮೇಲೆ ದಾವಾಹಾಕಿದ ಪಕ್ಷ

ದಲ್ಲಿ ಎಂಟು ಕಂತುಗಳಲ್ಲಿ ಕೊಡುವುದಕ್ಕೆ ಅವಕಾಶವಿತ್ತು. ಲಿಮಿಟೇಷನ್ ಆಕ್ಟಿಗೆ ವ್ಯವಸಾಯ ದಾವೆಯನ್ನು ಹೊರಪಡಿಸಿ, ೬ ವರ್ಷ ವಾಯಿದೆ ಸಿಕ್ಕುತ್ತಿತ್ತು. ವ್ಯವಸಾಯಗಾರನ ಚರಸ್ವತ್ತುಗಳನ್ನು ಮತ್ತು ವ್ಯವಸಾಯ ಮುಟ್ಟುಗಳನ್ನು ಜಪ್ತಿಮಾಡುವ ಅವಕಾಶ ಆ ಕಾನೂನಿನಲ್ಲಿ ಇಲ್ಲ. ಮೂರು ತರಹ ರಿಯಾಯಿತಿ ಇತ್ತು. ಹೀಗೆ ಎಲ್ಲಾ ವ್ಯವಸಾಯಗಾರ ಜಮೀನು ಪರಭಾರೆ ಮಾಡಿದ ಪಕ್ಷದಲ್ಲಿ, ಕ್ರಯಪತ್ರ ಎಂದು ಮಾರ್ಟಗೇಜ ಡೀಡನ್ನು ಪರಿಗಣನೆ ಮಾಡುವುದಕ್ಕೆ ಅವಕಾಶವಿತ್ತು. ಅಗ್ರಿಕಲ್ಚರಲ್ ಡೆಟ್ಟರ್ಸ ರಿಲೀಫ್ ಕಾನೂನು ತಂದಾಗ ಹಿಂದಿನಕಾನೂನು ರದ್ದು ಪಡಿಸಿದರು. ಡೆಬ್‌ಟರ್ಸ್ ರಿಲೀಫ್ ಆಕ್ಟ್ ಹೈಕೋರ್ಟನಲ್ಲಿ ರಾಜ್ಯಾಂಗಕ್ಕೆ ವಿರುದ್ಧವಾಗಿದೆಂದು ಅದನ್ನು ತೊಡೆದು ಹಾಕಿದರು. ಈ ಅಗ್ರಿಕಲ್ಚರಲ್ ಡೆಬ್‌ಟರ್ಸ್ ರಿಲೀಫ್ ಆಕ್ಟ್ ಬಂದಾಗ ಕೆಲವು ರಿಟ್‌ಗಳನ್ನು ಹಾಕಿದರು. ಹಿಂದೆ ಯಾವುದೇ ಸಂದರ್ಭದಲ್ಲಿ ವ್ಯವಹಾರ ಮಾಡಿಕೊಂಡು ಆಸ್ತಿಗಳನ್ನು ಕಳೆದುಕೊಂಡು ಪರಭಾರೆ ಮಾಡಿದ್ದಾರೆ, ಅದನ್ನು ಡೀಡ್ ಎಂದು ಪರಿಗಣಿಸಬೇಕು. ಜಮೀನನ್ನು ಪಡೆಯಲು ಅವಕಾಶವಿತ್ತು. ಡೆಬ್ಟರ್ ರಿಲೀಫ್ ಆಕ್ಟ್ ಬಂದಮೇಲೆ ಕೆಲವು ರಿಟ್‌ಗಳನ್ನು ಹಾಕಿದ್ದಾರೆ. ಅವ ಪೆಂಡಿಂಗಿನಲ್ಲಿ ಇವೆ. ಹೈಕೋರ್ಟ ಆ ಕಾನೂನನ್ನು ರದ್ದು ಪಡಿಸಿದರೂ ಸುಪ್ರೀಂ ಕೋರ್ಟನಲ್ಲಿ ಅದರ ವಿಚಾರಣೆ ನಡೆಯುತ್ತಿದೆ. ಮಧ್ಯದಲ್ಲಿ ಹಾಕಿರತಕ್ಕ ರಿಟ್‌ಗಳು ವಜಾ ಆಗುವವರೆಗೆ ರಕ್ಷಣೆ ಕೊಡಬೇಕು ಎನ್ನುವ ಉದ್ದೇಶದಿಂದ ಈ ಮಸೂದೆ ತರಲಾಗಿದೆ. ಜೊತೆಗೆ ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ ಏನು ಇತ್ತು ಆ ಕಾನೂನು ಪ್ರಕಾರ ವ್ಯವಸಾಯಗಾರನಿಗೆ ಸಿಕ್ಕತಕ್ಕಂಥ ಸೌಲಭ್ಯಗಳು ಇವತ್ತು ಇಲ್ಲವೆಂದು ಮಾನ್ಯ ಹೈಕೋರ್ಟನಲ್ಲಿ ತೀರ್ಮಾನ ಮಾಡಿದ್ದಾರೆ. ಒಂದುಸಾರಿ ಕಾನೂನು ಬದ್ಧವಾಗಿ ಒಂದು ಕಾನೂನಿನಿಂದ ಇನ್ನೊಂದು ಕಾನೂನು ರಿಪೀಲ್ ಆದರೆ ಆ ಕಾನೂನು ರಿವೈವ್ ಆಗುವವರೆಗೆ ಆ ಕಾನೂನು ಅಸ್ತಿತ್ವದಲ್ಲಿ ಇಲ್ಲ. ಆದುದರಿಂದ ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ ಅಸ್ತಿತ್ವದಲ್ಲಿ ಇಲ್ಲ ಎಂದು ಹೈಕೋರ್ಟನವರು ತೀರ್ಮಾನ ಮಾಡಿದ್ದಾರೆ. ತೀರ್ಮಾನಮಾಡಿದ ಮೇಲೆ ವ್ಯವಸಾಯಗಾರನಿಗೆ ಏನು ಆಗಿದೆ ಎಂದರೆ ಡೆಬ್‌ಟರ್ ರಿಲೀಫ್ ಆಕ್ಟ್‌ನಿಂದ ಪರಿಹಾರ ಅವನಿಗೆ ಸಿಕ್ಕುವುದಿಲ್ಲ. ಅಗ್ರಿಕಲ್ಚರಲ್ ರಿಲೀಫ್ ಆಕ್ಟ್‌ನಿಂದ ಪರಿಹಾರ ಸಿಕ್ಕುವುದಿಲ್ಲ. ಹೀಗಾಗಿ ಅವನು ಅಂತರಪಿಶಾಚಿ ಆಗಿದ್ದಾನೆ. ಸದ್ಯಕ್ಕೆ ಒಬ್ಬ ಪ್ರೋನೋಟ್ ಇಟ್ಟುಕೊಂಡಿದ್ದರೆ, ನಾಳೆ ಅವನು ದಾವಾಹಾಕಬಹುದು. ಹಿಂದೆ ವ್ಯವಸಾಯಗಾರನ ಮೇಲೆ ದಾವ ಹಾಕಿದರೆ ಒಂದುಸಾವಿರಕ್ಕಿಂತ ಕಡಿಮೆ ಉತ್ಪತ್ತಿ ಬಂದಾಗ ವ್ಯವಸಾಯಗಾರನು ಕಂತುಗಳಲ್ಲಿ ಹಣವನ್ನು ಕಟ್ಟಲು ಕೋರ್ಟಿನವರು ಅವಕಾಶಕೊಡುತ್ತಿದ್ದರು. ಆ ರೀತಿ ಪರಿಹಾರ ಸೌಲಭ್ಯ ಸಿಗುತ್ತಿತ್ತು. ಅಗ್ರಿಕಲ್ಚರಲ್ ರಿಲೀಪ್ ಆಕ್ಟ್ ವಜಾ ಆಗಿದೆ. ಡೆಬ್‌ಟರ್ ರಿಲೀಫ್ ಆಕ್ಟ್ ಸುಪ್ರೀಂ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಆದುದರಿಂದ ಅವನಿಗೆ ಹಿಂದೆ ಸಿಗುತ್ತಾ ಇರತಕ್ಕ ಪರಿಹಾರ ಇವತ್ತು ಸಿಕ್ಕುವುದಿಲ್ಲ. ಎರಡು ವರ್ಷಗಳಕಾಲ ಪೆಂಡಿಂಗ್‌ನಲ್ಲಿ ಇದ್ದ ಕೇಸುಗಳನ್ನು ಎಗ್ಜಿಕ್ಯೂಷನ್ ಸ್ಟೇಜಿನಲ್ಲಿ ಇದ್ದರೆ ಮಾತ್ರ ಎರಡುವರ್ಷದ ಕಾಲದವರೆಗೆ ತಡೆಹಿಡಿಯುವುದಕ್ಕೆ ಅವಕಾಶ ಮಾಡಿದ್ದಾರೆ. ಇವತ್ತು ವ್ಯವಸಾಯಗಾರನಿಗೆ ಹಿಂದೆ ಏನು ಪರಿ

ಹಾರ ದೊರಕುತ್ತಾ ಇತ್ತು ಆ ಪರಿಹಾರಗಳನ್ನೆಲ್ಲಾ ಸುಪ್ರೀಂ ಕೊರ್ಟಿನಲ್ಲಿ ತೀರ್ಮಾನ ಆಗುವವರೆಗೆ ಪಡೆಯುವುದಕ್ಕೆ ಇದರಲ್ಲಿ ಅವಕಾಶಮಾಡಿಕೊಟ್ಟಿಲ್ಲ. ಕಂತು ಕೇಳುವುದಕ್ಕೆ ಅವಕಾಶವಿಲ್ಲ, ಇವತ್ತು ದಾವ ಹಾಕಬಹುದಾದಂಥ ದಾವಾಗಳಲ್ಲಿ ವ್ಯವಸಾಯಗಾರ ಕಂತು ಕೇಳುವುದಕ್ಕೆ ಅವಕಾಶವಿಲ್ಲ, ಕೇಳಿದರೂ ಕೂಡ ಕೊಡುವುದಿಲ್ಲ.ಇದೇ ಕಾನೂನಿನಲ್ಲಿ ಹೇಗೆ ಹಾಲಿಯಲ್ಲಿರತಕ್ಕ ಪೆಂಡಿಂಗ್ ಕೇಸುಗಳನ್ನು ಎರಡುವರ್ಷಗಳ ಕಾಲದವರೆಗೆ ತಡೆಹಿಡಿಯಬೇಕೆಂದು ಹೇಳುತ್ತಾರೋ ಹಿಂದೆ ವ್ಯವಸಾಯಗಾರನಿಗೆ ಹಿಂದೆ ಇದ್ದ ಕಾನೂನುಗಳಲ್ಲಿ ಏನು ಪರಿಹಾರ ಸಿಗುತ್ತಿತ್ತು ಆ ಪರಿಹಾರಗಳನ್ನು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನ ಆಗುವವರೆಗೆ ಈ ಕಾನೂನಿನಲ್ಲಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಈಗಿರತಕ್ಕ ಸಣ್ಣಪುಟ್ಟ ವ್ಯವಸಾಯಗಾರ ಅನೇಕ ರೀತಿಯಲ್ಲಿ ತೊಂದರೆಗೆ ಒಳಗಾಗಬೇಕಾಗುತ್ತದೆ. ಕಂತು ಸಿಕ್ಕುವುದಿಲ್ಲ. ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಜಪ್ತಿಮಾಡಿಸಬಾರದೆಂದು ಹಿಂದಿನ ಕಾನೂನಿನಲ್ಲಿ ಇತ್ತು. ಸಣ್ಣಪುಟ್ಟ ವ್ಯವಸಾಯಗಾರ ಏನು ಇದ್ದಾರೆ, ಅವರಿಗೆ ಯಾವುದೇ ತರಹ ರಕ್ಷಣೆ ಕಾನೂನಿನಲ್ಲಿ ಸಿಕ್ಕುವುದಿಲ್ಲ. ಕೋರ್ಟಿನ ಮರ್ಜಿಬಂದರೆ ಕೊಡಬಹುದು. ಕಾನೂನು ಪ್ರಕಾರ ಒಂದು ಸಾವಿರ ರೂಪಾಯಿ ಆದಾಯದ ಒಳಗೇ ಇರತಕ್ಕ ವ್ಯವಸಾಯಗಾರ ಕೇಳತಕ್ಕ ಯಾವುದೇ ಪರಿಹಾರವನ್ನು ಕಾನೂನು ಬದ್ಧವಾಗಿ ಪಡೆಯಲು ಅವಕಾಶವಿಲ್ಲ. ಇರತಕ್ಕ ಹಳೆಯ ಪೆಂಡಿಂಗ್ ಕೇಸಿಸ್ ತಡೆಹಿಡಿಯುವುವಕ್ಕೆ ಏನು ತಂದಿದ್ದೀರಿ. ಅದರಲ್ಲಿ ಹಿಂದೆ ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ ಪ್ರಕಾರ ಏನು ಪರಿಹಾರ ಅವರಿಗೆ ಸಿಕ್ಕುತ್ತಿತ್ತೋ ಅಂತಹ ಎಲ್ಲಾ ಪರಿಹಾರಗಳನ್ನು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನ ಆಗುವವರೆಗೆ ಸಿಗುವ ರೀತಿಯಲ್ಲಿ ಅಳವಡಿಸಬೇಕು. ಸೆಕ್ಷನ್ ೩ ರಲ್ಲಿ ಹೀಗೆ ಹೇಳಿದೆ :—

> "Not withstanding anything contained in any law or judgement or order of any court or competent authority, all proceedings in execution of any decree or order of any court or competent authority for the sale of any land held by an agricultural debtor."

It is only in respect of execution proceedings and not case of outstanding cases against agriculturists. ಆದುದರಿಂದ ಈ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದು ಕೇಳಿಕೊಂಡು ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3–30 P.M.

†ಶ್ರೀ ಪಿ.ಎಸ್.ಪಾಟೀಲ (ಹುಮ್ನಾಬಾದ).—ಮಾನ್ಯ ಅಧ್ಯಕ್ಷರೇ, ಮೈಸೂರು ಅಗ್ರಿಕಲ್ಚರಲ್ ಡೆಬೆಟರ್ಸ್ (ಟೆಂಪರರಿ ಪ್ರೊಟೆಕ್ಷನ್) ಬಿಲ್, ೧೯೭೩ ಇದರಲ್ಲಿ ಸರ್ಕಾರ

ಕೊಡುತ್ತಾ ಇರತಕ್ಕ ರಿಲೀಫ್ ಏನು ಇದೆ ಇದು ಬಹಳ ಸಣ್ಣ ರಿಲೀಫ್, ದೊಡ್ಡ ರಿಲೀಫ್ ಇಲ್ಲ. ಆದರೆ ಈ ರಿಲೀಫ್ ಬಗ್ಗೆ ದೊಡ್ಡ ಹಾಹಾಕಾರ, ಕೋಲಾಹಲ ಏಳುವಂಥ ಸನ್ನಿವೇಶ ಬಂದಿದೆ. ಹಳ್ಳಿಯಲ್ಲಿ ರೈತ ತನ್ನ ಮದುವೆಗೆ ತೆಗೆದುಕೊಂಡ ದುಡ್ಡು ತನ್ನ ಮಕ್ಕಳ ಮದುವೆಯ ಕಾಲದಲ್ಲಿ ಕೂಡ ಕೊಡದೇ ಇರುವ ಸನ್ನಿವೇಶ ಇದೆ. ಸ್ಟೇ ಆರ್ಡರ್ ಬಗ್ಗೆ ಪ್ರೊವಿಷನ್ ಇಂಪ್ಲಿಮೆಂಟ್ ಮಾಡಿರುವುದರಿಂದ ವರ್ತಕರ ಮತ್ತು ರೈತರ ಮಧ್ಯದಲ್ಲಿ ಇರುವ ಒಳ್ಳೆಯ ಬಾಂಧವ್ಯ ಹೊರಟು ಹೋಗುತ್ತದೆಂದು, ಈ ಬಾಂಧವ್ಯದ ಹೆಸರಿನಲ್ಲಿ ಗೋಮುಖ ವ್ಯಾಘ್ರ ಯಾರು ಇದ್ದಾರೆ, ಅವರು ವ್ಯಸನ ಪಡಬಹುದು. ಹಳ್ಳಿಯಲ್ಲಿ ರೈತನ ಹೆಂಡತಿ ಟಿ. ಬಿ., ಕ್ಯಾನ್ಸರ್‌ನಿಂದ ಸಾಯುತ್ತಿದ್ದಾಳೆ ಎನ್ನುವ ಸಂದರ್ಭದಲ್ಲಿ ಬೇರೆ ಕಡೆ ಬೆರಳು ಹಾಕುವ ಬದಲು ಗದ್ದೆಯಲ್ಲಿ ಬೆರಳು ಹಾಕುತ್ತಾನೆ. "A Beggar cannot be a chooser" ಎಂದು ಹೇಳಿದ ಹಾಗೆ ಜಮೀನಿನ ಮೇಲೆಯೇ ಬೆರಳು ಹಾಕಬೇಕಾಗುತ್ತದೆ. ರೈತ ಮನೆತನದಲ್ಲಿ ಬೆಳೆದು ಬಂದಿರುವ ನಾನು ಲಾಯರ್ ವೃತ್ತಿಯಲ್ಲಿ ಇದ್ದರೂ ಕೂಡ ೩೦ ಎಕರೆ ಗದ್ದೆ ಮತ್ತು ತೋಟ ಇರುವ ಜಮೀನಿನ ಮೇಲೆ ೪೩ ಸಾವಿರ ರೂಪಾಯಿ ತೆಗೆದುಕೊಂಡ ಹಣವನ್ನು ತೀರಿಸಿಲ್ಲ ಎಂದ ಮೇಲೆ, ರೈತ ೨ ಸಾವಿರ ರೂಪಾಯಿ ಮೂರು ಸಾವಿರ ರೂಪಾಯಿ ತಂದೆ ಮದುವೆಯಲ್ಲಿ ಸಾಲ ಮಾಡಿದ್ದನ್ನು ಮಕ್ಕಳು, ಮೊಮ್ಮಕ್ಕಳಿಗೆ ಮದುವೆಯಾದರೂ ಸಾಲ ತೀರಿಸುವ ಹಾಗಿಲ್ಲ. ಭೂಮಿ ಹಾಗೆ ಇದೆ, ಆದರೆ ಭೂಮಿಯಲ್ಲಿ ಬಂದಂಥ ಬೆಳೆ ಮಾತ್ರ ಬಡ್ಡಿ ತೀರಿಸುವುದರಲ್ಲೇ ಹೋಗುತ್ತದೆ. ಇಂತಹ ಸನ್ನಿವೇಶ ಇರುವಾಗ, ಪೋಲರೈಸೇಷನ್ ಆಫ್ ರೈಟ್ಸ್ ಮತ್ತು ಐಡಿಯಾಲಜೀಸ್ ಆಗುತ್ತಿರುವಾಗ ಸರ್ಕಾರ ರೈತರಿಗೆ ಸಹಾಯ ಮಾಡಲು ಪೂರ್ತಿ ಧೈರ್ಯ ತೆಗೆದುಕೊಳ್ಳಲಿಲ್ಲ. ಸುಪ್ರೀಂ ಕೋರ್ಟಿನ ತೀರ್ಪು ಬರುವವರೆಗೆ ಮೊದಲು ರಿಲೀಫ್ಸ್ ರೈತರಿಗೆ ಕೊಡುತ್ತಿದ್ದರು. ಅಷ್ಟೇ ರಿಲೀಫ್ಸ್ ೨ ವರ್ಷದ ವರೆಗೆ ಕೊಡುತ್ತೇವೆಂದು ರೀಡೇಟ್ ಮಾಡುವ ತಿದ್ದುಪಡಿ ಆಕ್ಟನ್ನು ತರಬೇಕಾಗುತ್ತದೆಂದು ನನಗೆ ಅನ್ನಿಸುತ್ತದೆ.

ಮಾನ್ಯ ಸಚಿವರ ಬಗ್ಗೆ ನನಗೆ ಅಪಾರ ಗೌರವವಿದೆ. ನಾನು ಅವರಿಗೆ ಒಂದು ಸಜೆಷನ್ ಕೊಡುತ್ತೇನೆ. ರೈತ ಜನತೆಯ ಬಗ್ಗೆ ಒಂದು ಸವಲತ್ತು ಕೊಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ, ಹಿಂದಕ್ಕೆ ಹೆಜ್ಜೆ ಇಡುವುದಿಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಸಜೆಷನ್ ಮಾಡಿದರೆ ಅದು ಆಪೋಸೀಷನ್ ಕಡೆಯಿಂದ ಬಂದಿದೆ, ಅದನ್ನು ಅಕ್ಸೆಪ್ಟ್ ಮಾಡಿದರೆ ಎಂಬರಾಸಿಂಗ್ ಸಿಚುಯೇಷನ್ ಆದೀತು ಎಂದು ತಿಳಿದುಕೊಳ್ಳಕೂಡದು.

ಈ ಬಿಲ್ಲಿನಲ್ಲಿ ಏನೇನು ಶಬ್ದಗಳನ್ನು ಇನ್‌ಕಾರ್ಪರೇಟು ಮಾಡಬೇಕಾಗಿತ್ತೋ, ಅವುಗಳನ್ನು ಮಾಡಿದ್ದರೆ, ಹಿಂದಿನ ಕಾಯಿದೆಗಳಲ್ಲಿ ರೈತನಿಗೆ ಏನು ಲಾಭ ಸಿಗುತ್ತಿತ್ತೋ ಅವು ದೊರೆಯುತ್ತಿದ್ದುವು. ಆದುದರಿಂದ ಆ ಶಬ್ದಗಳನ್ನು ಇಲ್ಲಿ ಸೇರಿಸುವುದಕ್ಕೆ ಅವಕಾಶ ಇದೆ. ಶ್ರೀಮಾನ್ ಶಾಮಣ್ಣನವರು ಹೇಳಿದಂತೆ ಹೆಚ್ಚು ಹೆಚ್ಚು ಕಾಯಿದೆ

ಗಳು ಬರುತ್ತಿವೆ. ಲಾ ಡಿಪಾರ್ಟಮೆಂಟ ಪುರಷೊತ್ತು ಇಲ್ಲದಂತೆ ಕಾಯಿದೆಗಳನ್ನು ಡ್ರಾಪ್ಟ್ ಮಾಡುವುದೇ ಆಗಿದೆ. ಫಂಡಮೆಂಟಲ್ ರೈಟ್ಸ್ ಮತ್ತು ಬೇರೆ ಬೇರೆ ರೈಟ್ಸ್ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರುವುದರಲ್ಲಿ ದೇಶದಲ್ಲಿ ಕೋಲಾಹಲ ಇರುವಾಗ, ಹೊಸದಾದ ಕ್ರಾಂತಿ ಬರುವಾಗ, ಸಮಾಜವಾದದ ಕಡೆಗೆ ತಿರುಗಿ ನೋಡುವಾಗ "Shaekles of slavery are to the thrown out," ಈ ಕೆಲವನ್ನು ಬಿಟ್ಟಿರುವುದು ಸರಿಯಲ್ಲ. "Vulnerable section of the society" ಗೆ ಆಗಿದ್ದಂತಹ ಅನ್ಯಾಯವನ್ನು ಕಿತ್ತು ಒಗೆಯಬೇಕಾದರೆ ದಿನ ದಿನ ಹೊಸ ಕಾಯಿದ ಮಾಡಬೇಕಾಗುತ್ತದೆ. ಅದಕ್ಕೆ ಈ ಸದನ ಎರಡು ತಿಂಗಳಿಗಿಂತಲೂ ಹೆಚ್ಚು ಕೂಡ ಬೇಕಾಗುತ್ತದೆ. ಆದುದರಿಂದ ನಾವು ಮಾಡತಕ್ಕ ಕಾಯಿದೆ ದೇಶವನ್ನು ಸುಧಾರಣೆ ಮಾಡಬೇಕು. ಇಲ್ಲದಿದ್ದರೆ ಈ ಕಾಯಿದೆಯಿಂದ ಪ್ರಯೋಜನವಿಲ್ಲ. ಆದುದರಿಂದ ಈ ಕಾಯಿದೆಯನ್ನು ಬಿಟ್ಟು ಮತ್ತೊಂದು ಕಾಯಿದೆ ಮಾಡೋಣ.

ಇನ್ನು ಹಳ್ಳಿಯಲ್ಲಿ ರೈತನಿಗೆ ಮದುವೆಗೆ, ಮತ್ತೊಂದಕ್ಕೆ ದುಡ್ಡು ಕೊಡುವುದಿಲ್ಲ ಹಿಂದೆ ವರ್ತಕರು ರೈತನಿಗೆ ಸಹಾಯ ಮಾಡುತ್ತಿದ್ದರು. ನಿನ್ನೆಯವರೆಗೆ ದುಡ್ಡು ಕೊಡುತ್ತಿದ್ದರು. ನಾಳೆಯಿಂದ ಕೊಡುವುದಿಲ್ಲ ಎನ್ನುವ ಸ್ವಾರ್ಥಿಗಳಾಗುತ್ತಾರೆಂದು ಹೇಳುತ್ತಾರೆ. ಆದರೆ ಅವರು ಬಡವರು ಆಗಿರುವುದಕ್ಕೆ ನಾನೇ ಕಾರಣ. ಆದುದರಿಂದ ನನ್ನ ಹತ್ತಿರ ಇರುವ ದುಡ್ಡಿನಲ್ಲಿ ಅವರಿಗೆ ಸಹಾಯ ಮಾಡಿ ಅವರ ಹಣವನ್ನು ಅವರಿಗೆ ಹಾನೆಸ್ಟಾಗಿ ವಾಪಸ್ಸು ಕೊಡುತ್ತೇನೆಂದು ಫಿಲಿಂಗು ಇಟ್ಟುಕೊಳ್ಳಬೇಕಾಗುತ್ತದೆ. ನಮ್ಮ ಸಮಾಜಕ್ಕೆ ತಿಳುವಳಿಕೆ ಉಂಟುಮಾಡಿ ಬದಲಾವಣೆ ತಂದುಕೊಳ್ಳಬೇಕಾಗುತ್ತದೆ. ರೈತರಿಗೆ ಇದರಿಂದ ಹೆಚ್ಚಿಗೆ ಅನುಕೂಲ ಮಾಡಿಕೊಡುತ್ತಾ ಇಲ್ಲ. ರೈತ ವರ್ಗಕ್ಕೆ ಅನ್ಯಾಯ ಮಾಡುವುದಕ್ಕೆ ಹೋದರೆ, ಈ ಕಾಯಿದೆ ರಕ್ಷಣೆ ಕೊಡುತ್ತದೆ. ಈ ಕಾಯಿದೆಯಲ್ಲಿ ಕೊಟ್ಟ ಸೌಲಭ್ಯ ಏನಂದರೆ, ಸುಪ್ರೀಂ ಕೋರ್ಟಿನಲ್ಲಿ ಮೈಸೂರು ಸರ್ಕಾರದವರು ಫೈಲು ಮಾಡಿದ ಅಪೀಲು ನಿರ್ಣಯ ಆಗುವವರೆಗೆ ಕೋರ್ಟಿನಲ್ಲಿ ಇಷ್ಟು ಪೆಂಡಿಂಗ್ ಡಿಕ್ರೀಸಿಗೆ ಒಂದು ಸ್ಟೇ ೨ ವರ್ಷದ ವರೆಗೆ ರೈತಾಪಿ ಜನಕ್ಕೆ ಕೊಟ್ಟಿದ್ದಾರೆ. ಇದಕ್ಕೆ ಹೆದರಬೇಕಾಗಿಲ್ಲ. ಇದು ಏನೂ ದೊಡ್ಡ ಭೂತ ಅಲ್ಲ. ಇದು ಛಿ ಲೈನ ಕಾಯಿದೆ, ೨ ವರ್ಷದವರೆಗ ರಕ್ಷಣೆ ಕೊಡುವ ಸಣ್ಣ ಕಾಯಿದೆ ಇದು. ಇದರ ಬಗ್ಗೆ ಯಾರೂ ಕೂಡ ಸಂಶಯ ದೃಷ್ಟಿಯನ್ನು ತಂದುಕೊಳ್ಳಬೇಕಾಗಿಲ್ಲ. ಎರಡನೆಯದಾಗಿ, ಇದು ಡಿಫೆಕ್ಟೀವ್ ಲೆಜಿಸ್ಲೇಷನ್ ಇದೆ. ಅರ್ಧ ಮನಸ್ಸಿನಿಂದ ಕಾಯಿದೆ ತರುತ್ತಾ ಇದ್ದಾರೆ. ೫ ನಿಮಿಷದಲ್ಲಿ ಪಾಸ್‌ಮಾಡಿ ಕಾಯಿದೆ ಮಾಡೋಣ ಎಂದು ಹೇಳಿ ಏನು ಬರೆಯಬೇಕೋ ಅದನ್ನು ಬರೆದು ಕಳುಹಿಸುತ್ತಿದ್ದಾರೆ ಎಂದು ಹೇಳಿದರು. ಹೈಕೋರ್ಟಿನಲ್ಲಿ ಮಾರ್ಪಾಡು ಆಗುತ್ತಿದೆ ಎಂದು ತಿಳಿದುಕೊಳ್ಳಬೇಕು. ಇದು ಎರಡನೆಯದು ಮೂರನೆಯದಾಗಿ, ಇವತ್ತಿನ ದಿವಸ ಸಮಾಜ ಯಾವ ದಾರಿಯಲ್ಲಿ ಹೋಗಬೇಕೋ ಆ ದಾರಿಯಲ್ಲಿ ಜುಡಿಶಿಯರಿ ಹೋಗದಿದ್ದರೆ ಅದು ಬದುಕಲಾರದು. ಸ್ವಲ್ಪ ಹಿಂದು ಮುಂದು ನೋಡುತ್ತಿದೆ. ಜುಡಿಶಿಯರಿಯಲ್ಲಿ ಲೆಜಿಸ್ಲೇಚರ್‌ನಲ್ಲಿ ಪಾಸ್ ಮಾಡಿದ

ಕಾಯಿದೆಗೆ ಮನ್ನಣೆ ಕೊಡದೆ ಕಾಯಿದೆಯನ್ನು ರೀಪಿಲ್ ಮಾಡಿದ್ದಾರೆ. ಈ ಕಾಯಿದೆಗೆ ಜೀವ ಇಲ್ಲ. ಇದು ಕಂಪ್ಲೀಟ್‌ಲಿ ವಾಯ್ಡ್ ಇದೆ. ಅಲ್ಟ್ರಾವೈರಿಸ್ ಇದೆ ಎಂದು ಡಿಕ್ಲೇರ್ ಮಾಡಿದ ಮೇಲೆ ಮತ್ತೊಂದು ಹೊಸ ಕಾಯಿದೆ ಬರಬೇಕಾಗುತ್ತದೆ. ಆ ಧಾಟಿಯಲ್ಲಿ ನನ್ನ ಮಿತ್ರರು ಸ್ವಾಗತ ಅಂತ ಹೇಳಿದರು ಇದಕ್ಕೂ ಕೂಡ ಕೆಲವು ಟೀಕೆಗಳು ಬಂದಿವೆ. ಇದು ರೈತ ಜೀವಿಗಳಿಗೆ ಸಹಾಯ ಮಾಡುವ ಸಣ್ಣ ಕಾಯಿದೆ ಇದ್ದರೂ ವೆಸ್ಟೆಡ್ ಇಂಟರೆಸ್ಟ್ ಏನು ಇದ್ದಾರೆ, ಸಾಲಗಾರರು ಏನು ಇದ್ದಾರೆ, ಅವರು ರೈತನ ರಕ್ತ ಕುಡಿದು ರಾಕ್ಷಸರಾಗಿದ್ದಾರೆ. ಕೆಲವರು ರೈತರಿಗೆ ಸಹಾಯ ಮಾಡಿರಬಹುದು. ಆದರೆ ಲಕ್ಷಾವಧಿ ರೈತರು ನರಳಾಡುತ್ತಿದ್ದಾರೆ. ಯಾಕಯ್ಯಾ ತಂದೆ ಸಾಯುತ್ತಾ ಇರುವಾಗ ೪ ಎಕರೆ ಜಮೀನು ಬಿಟ್ಟು ಹೋಗಿದ್ದರು ಏನಾಯಿತು ಎಂದು ಕೇಳಿದಾಗ, ತಂದೆ ಮದುವೆ ಮಾಡಿದಾಗ ಮಾಡಿದ ಸಾಲ ತೀರಿಸುವುದಕ್ಕೆ ಆಗಲಿಲ್ಲ, ಒಂದು ವರ್ಷ ಕ್ಷಾಮ ಬಂದು, ಊಟಕ್ಕೂ ಏನೂ ಇರಲಿಲ್ಲ. ೨,೦೦೦ ರೂಪಾಯಿ ಸಾಲ ಮಾಡಿದೆ, ೪ ಎಕರೆ ಜಮೀನು ಕಳೆದುಕೊಂಡು ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ಇಂತಹ ಸ್ಥಿತಿ ಇರುವಾಗ, ಸಮಾಜವಾದದಲ್ಲಿ ಬದಲಾವಣೆ ಆಗಲಿ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ೭೫ ಪರ್ಸೆಂಟ್ ಪಾಪಲೇಷನ್ ರೈತ ಜನಾಂಗ ಇದೆ. ಚಿತ್ರಹಿಂಸೆಗೆ ಗುರಿಯಾಗಿರುವ ರೈತ ಜನಾಂಗದ ಬಗ್ಗೆ ಈ ಕಾಯಿದೆ ತರುತ್ತಿದ್ದಾರೆ. ಇದಕ್ಕೆ ಬೆಂಬಲ ಇದು ಇನ್ನು ಏನು ಬರಬೇಕಾಗಿದೆಯೋ ಅದೂ ಬರಲಿ. ಈ ಕಾಯಿದೆಗೆ ನನ್ನ ಬೆಂಬಲ ಇದೆ ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇದರಲ್ಲಿ ಎಕ್ಸ್‌ಪ್ಲನೇಷನ್ (೧) ಸಬ್‌ಕ್ಲಾಸ್ (೨) ರಲ್ಲಿ ಓದಿದರೆ ಅದು ಈ ರೀತಿ ಇದೆ:—

Explanation I — sub clause (ii) says :

> " (ii) "holder" means a holder as defined in the Mysore Land Revenue Act, 1964, and includes a protected tenant as defined in the Mysore Land Reforms Act, 1961, but does not include a holder of any land held on behalf of a religious or charitable institution; and the expression "to hold land" shall be constructed accordingly; "

ಈಗ ಉಳುವವನೇ ಭೂಮಿಯ ಒಡೆಯ ಎಂದು ಏನು ಮಾಡಿದ್ದೀರೋ ಅದು ಈ ರಿಲಿಜಿಯಸ್ ಅಂಡ್ ಛಾರಿಟಬಲ್ ಇನ್ಸ್ಟಿಟ್ಯೂಷನನಲ್ಲಿ ಯಾರು ಜಮೀನನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡಿದ್ದಾರೋ ಅವರಿಗೆ ಇದು ಅನ್ವಯಿಸುವುದಿಲ್ಲ. ಅಂಥಾ ಬಿಲ್ಲು ತಂದಿದ್ದೀರಿ. ಇದೂ ಕೂಡ ರೆಡೆಂಪ್ಟ ಆಗುತ್ತದೆ. ಮುಂದೆ ಇದಕ್ಕೆ ನೀವು ಯಾವು ಕಾನೂನು ತರುತ್ತೀರಿ? ನಿನ್ನೆ ದಿವಸದವರೆಗೆ ನಾವು ಲ್ಯಾಂಡ್ ರೀಫಾರಂಸ್ ಬಗ್ಗೆ ಚರ್ಚೆ ಮಾಡಿದ್ದೇವೆ ಪುನಃ ಸೋಮವಾರ ಚರ್ಚೆ ಮಾಡುತ್ತಿದ್ದೇವೆ. ಈ

ರಿಲಿಜಿಯಸ್ ಅಂಡ್ ಛಾರಿಟಬಲ್ ಇನ್ಸ್ಟಿಟ್ಯೂಷನ್‌ನಲ್ಲಿ ಜಮೀನುಗಳು ಏನು ಇವೆ ಅದರ ಮೀನ್ಸ್ ಆಫ್ ಪ್ರೊಡಕ್ಷನ್ಸ್ ಅವರಲ್ಲೇ ಕೇಂದ್ರೀಕೃತವಾಗಿದೆ. ಈವೊತ್ತು ಆ ಭೂಮಿಯನ್ನು ಕೊಡುವುದಾದರೆ ಅದು ಯಾರ ಕೈಯ್ಯಲ್ಲಿ ಇರಬೇಕು ಎಂದರೆ ಈಗ ಉಳುವವನೇ ಹೊಲದ ಒಡೆಯ ಎಂದು ಏನು ಮಾಡಿದ್ದೀರೋ ಆ ರೀತಿ ಆ ಭೂಮಿ ಮಣ್ಣಿನ ಮಗನ ಕೈಯ್ಯಲ್ಲಿ ಇರಬೇಕು. ಈಗ ಇದರಲ್ಲಿ ನನಗೆ ಸಂಶಯ ಬರುತ್ತದೆ. ಇದು ಓವರ್‌ಸೈಟ್ ಇನ್‌ಕ್ಲೂಡ್ ಆಗಿದೆ ಎಂದು ಕಂಡು ಬರುತ್ತದೆ. ಆ ರೀತಿ ಇನ್‌ಕ್ಲೂಡ್ ಆಗಿದ್ದರೆ ಅದನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಹೈದ್ರಾಬಾದಿನಲ್ಲಿ ಮನಿಲೆಂಡರ್ಸ್ ಆಕ್ಟ್ ಇತ್ತು. ಅದರಲ್ಲಿ ಬೇಕಾದಷ್ಟು ಕ್ಲಾಸ್ ಇತ್ತು. ಹಳೇ ಮೈಸೂರಿನಲ್ಲೂ ಆಕ್ಟ್ ಇತ್ತು. ಎರಡು ಕಡೆಯೂ ವೆಸ್ಟೆಡ್ ಇಂಟರೆಸ್ಟ್ ಇದ್ದುವು. ಕೆಲವು ಭಾಗದಲ್ಲಿ ಕೆಟ್ಟವರೂ ಇದ್ದರು, ಕೆಲವು ಭಾಗದಲ್ಲಿ ಒಳ್ಳೆಯವರೂ ಇದ್ದರು. ಅಲ್ಲೂ ಕೂಡ ಎಕ್ಸಪ್ಲಾಯಿಟರ್ಸ್ ಎಕ್ಸ್‌ಪ್ಲಾಯಿಟೆಡ್ ಆಗಿ ಇದ್ದರು. ಮತ್ತು ನಮ್ಮ ಕಡೆ ನವಾಬ್‌ಗಳು ಇದ್ದರು, ಮತ್ತೊಂದು ಕಡೆ ದೊಡ್ಡ ದೊಡ್ಡ ಜಮೀನ್ದಾರರ ಕೈಯಲ್ಲಿ ಈ ಖಾತೆ ಇದ್ದವು. ಆಗಿನ ಕಾಲದಲ್ಲೂ ಎಕ್ಸ್‌ಪ್ಲಾಯಿಟರ್ಸ್ ಎಕ್ಸ್‌ಪ್ಲಾಯಿಟೆಡ್ ಆಗಿ ಇದ್ದರು. ಆಗ ಸರ್ಕಾರ ಇದನ್ನು ಏತಕ್ಕೆ ಮಾಡಲಿಲ್ಲ, ಶ್ರಮಪಟ್ಟು, ಬೆವರು ಸುರಿಸುವವರ ಕೈಗೆ ಇದನ್ನು ಸಮನಾಗಿ ಹಂಚಬೇಕಾಗಿತ್ತು. ಮೀನ್ಸ್ ಆಫ್ ಪ್ರೊಡಕ್ಷನ್ಸ್ ಅನ್ನುವುದು ಯಾರು ಉಳುತ್ತಾರೋ ಅವನ ಕೈಯ್ಯಲ್ಲಿ ಭೂಮಿ ಇರಬೇಕು. ಹಿಂದೆ ಎಲ್ಲರೂ ಒಂದು ಬಂಧುತ್ವದ ಭಾವನೆ ಯಲ್ಲಿದ್ದು ಹಂಚಿಕೊಳ್ಳುತ್ತಿದ್ದರು. ಯಾರೂ ಕೂಡ ಕೀಳು, ಮೇಲು ಎನ್ನುವ ಭಾವನೆ ಇರಲಿಲ್ಲ. ಆವೊತ್ತು ಫ್ಯೂಡಲಿಸಮ್ ಇತ್ತು, ಆಮೇಲೆ ಫ್ಯೂಡಲಿಸಮ್ ಹೋಗಿ ಕ್ಯಾಪಿಟಲಿಸಮ್ ಬಂತು, ಆಮೇಲೆ ಕ್ಯಾಪಟಲಿಸಮ್ ಹೋಗಿ ಸೋಷಿಯಾಲಿಸಮ್ ಬಂದಿದೆ. ಈವೊತ್ತಲ್ಲ ನಾಳೆಯಾದರೂ ಈ ಸೋಷಿಯಾಲಿಸಮ್ ತರುತ್ತೀರಿ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—

ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ವಿರೋಧಿಸುತ್ತಾ ಕೆಲವು ಮಾತು ಗಳನ್ನು ಹೇಳಬಯಸುತ್ತೇನೆ. ಈಹೊತ್ತು ಹಳ್ಳಿಯಲ್ಲಿರತಕ್ಕಂಥ ಸಣ್ಣಪುಟ್ಟ ರೈತರ ಕೊಲೆ ಆಯಿತು ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತು ಸಣ್ಣಪುಟ್ಟ ರೈತರು ದುಡ್ಡು ಇರುವವರ ಹತ್ತಿರ ಹೋಗಿ ಪ್ರೋನೋಟ ಬರೆದುಕೊಟ್ಟು, ದುಡ್ಡು ತೆಗೆದುಕೊಂಡು ಬಂದು ವ್ಯವಸಾಯ ಮಾಡಿ ಉತ್ಪಾದನೆ ಮಾಡುತ್ತಿದ್ದರು. ಈಗ ಈ ಮಸೂದೆಯಿಂದ ಅವರಿಗೆ ಮೂರು ಕಾಸೂ ಕೂಡ ಹುಟ್ಟದೆ ಇದ್ದ ಹಾಗೆ ಆಯಿತು. ಈಗ ಇದರಿಂದ ಏನಾಗುತ್ತದೆ ಎಂದರೆ ದುಡ್ಡು ಇರುವವರು ಅವನ ಹತ್ತಿರ ಆ ಜಮೀನನ್ನು ಕ್ರಯಕ್ಕೆ ಬರೆಸಿಕೊಂಡು ಕೊಡುತ್ತಾರೆ. ಇದರಿಂದ ರೈತರನ್ನು ಹುಲಿ ಬಾಯಿಗೆ ಹಾಕಿದ ಹಾಗಾಯಿತು. ಯಾವ ಕೆಲಸ ಮಾಡ

ಬೇಕಾದರೂ ಯೋಚನೆ ಮಾಡಬೇಕು. ಈವೊತ್ತು ನೀವು ಏನೋ ಒಂದು ಮಸೂದೆ ಮಾಡುತ್ತೀರಿ, ಆದರೆ ರೈತರಿಗೆ ಸರಿಯಾದ ಕಾಲಕ್ಕೆ ಗೊಬ್ಬರ ಸಿಕ್ಕುವುದಿಲ್ಲ, ಬೀಜ ಸಿಕ್ಕುವುದಿಲ್ಲ, ಯಾವ ರೀತಿಯಾದ ಸೌಕರ್ಯವು ಸಿಕ್ಕುವುದಿಲ್ಲ, ಹಣವೂ ಕೂಡ ಕಾಲಕ್ಕೆ ಸರಿಯಾಗಿ ಸಿಕ್ಕುವುದಿಲ್ಲ. ಹೀಗೆ ಮಾಡಿದರೆ ರೈತರಿಂದ ಕ್ರಾಂತಿ ಆದೀತು ಎನ್ನುವ ಮಾತನ್ನು ಹೇಳುತ್ತೇನೆ. ಆದುದರಿಂದ ಈ ಮಸೂದೆ ತರುವುದಕ್ಕೆ ಮುಂಚೆ ಯೋಚನೆಮಾಡಿ. ಬೇಕಾದರೆ ಅವನಿಗೆ ಬೇರೆ ವಿಧದಲ್ಲಿ ಸಹಾಯಮಾಡಿ. ಕಡಿಮೆ ಬಡ್ಡಿಯಲ್ಲಿ ಹಣ ಕೊಡಿ. ಕಂತುಗಳಲ್ಲಿ ಕೊಡಿ ಅಂಥಾ ಒಂದು ವ್ಯವಸ್ಥೆ ಮಾಡಿ. ಈಗ ತಂದಿರುವ ಮಸೂದೆಯಿಂದ ಅವರ ಆಸ್ತಿಯನ್ನು ಶ್ರೀಮಂತರು ಕಿತ್ತುಕೊಳ್ಳುವು ದಕ್ಕೆ ಅವಕಾಶವಾಗುತ್ತದೆ. ಆದಕಾರಣ ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಭಂಗಿ (ಜಮಖಂಡಿ).— ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯನ್ನು ನಾನು ಬೆಂಬಲಿಸುತ್ತಾ ಈ ಬಗ್ಗೆ ಹಲಕೆಲವು ಸಲಹೆಗಳನ್ನು ಹೇಳ ಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಮೈಸೂರು ರಾಜ್ಯದಲ್ಲಿ ಮೈಸೂರು ಅಗ್ರಿ-ಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್ ೧೯೬೬ ರಲ್ಲಿ ಪಾಸ ಆದನಂತರ ಸಾಹುಕಾರರು ಅನೇಕ ಜನರು ಮೈಸೂರು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ದಾಖಲೆ ಮಾಡಿ ಅವುಗಳಿಗೆ ತಡೆ ಆಜ್ಞೆ ತಂದರು. ಕೊನೆಗೆ ಮೈಸೂರು ಅಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್ ರದ್ದಾಯಿತು. ತದನಂತರ ಮೈಸೂರು ಸರ್ಕಾರದವರು ಹುಕುಂ ವಿರುದ್ಧವಾಗಿ ಸುಪ್ರೀಂ ಕೋರ್ಟಿನಲ್ಲಿ ಅಪೀಲು ರೂಪವಾಗಿ ದಾಖಲು ಮಾಡಿ ೨-೩ ವರ್ಷ ಆದುವು. ಆ ರಿಟ್ ಪಿಟಿಷನ್ಸ್ ಸುಪ್ರೀಮ ಕೋರ್ಟಿನಲ್ಲೀ ಇನ್ನೂ ಪೆಂಡಿಂಗ್ ಇದೆ. ಆದುದರಿಂದ ಈ ಬಗ್ಗೆ ಮೈಸೂರು ಸರ್ಕಾರದವರು ಒಬ್ಬ ತಜ್ಞ ಅಡ್ವೋಕೇಟರ ರನ್ನು ನೇಮಿಸಿ ಈ ವಿಷಯದಲ್ಲಿ ಕೂಡಲೇ ಹಿಯರಿಂಗ ದೊರಕಿಸಿ ಈ ಕಾಯಿದೆ ಕ್ರಮಬದ್ಧವಾಗಿ ಇದೆ ಎಂಬ ಬಗ್ಗೆ ತೀರ್ಮಾನ ಪಡೆಯಲು ಪ್ರಯತ್ನ ಮಾಡ ಬೇಕೆಂದು ನಾನು ಈ ಸಮಯದಲ್ಲಿ ಸೂಚಿಸ ಬಯಸುತ್ತೇನೆ.

ಇನ್ನು ಎರಡನೇ ವಿಷಯ 'ಹೇಳುವುದು ಏನೆಂದರೆ ಈ ಮಸೂದೆಯಿಂದ ಕೇವಲ ಕೆಲವು ರೈತರಿಗೆ ಅವರ ಭೂಮಿ ಡಿಕ್ರಿಗೆ ಬಂದು ಹರಾಜು ಆದರೂ ಕೂಡ ಅವರಿಗೆ ಪರಿಹಾರ ಸಿಗದೇ ಹೋದಾಗ ಬೇರೆ ವಿಧವಾಗಿ ಸಾಹುಕಾರ ಜನರು ಈ ರೈತರಿಗೆ ಸಾಕಷ್ಟು ತೊಂದರೆ ಕೊಡುತ್ತಾರೆ. ಸಿವಿಲ್ ಕೋರ್ಟಿನಲ್ಲಿ ಕೇಸು ದಾಖಲೆ ಮಾಡಿ ಅವರನ್ನು ತುರಂಗದಲ್ಲಿ ಹಾಕಿಸುತ್ತಾರೆ. ಅವರಿಗೆ ಯಾವ ವಿಧವಾದ ರಕ್ಷಣೆಯೂ ಇಲ್ಲ. ಬಾಂಬೆ ಅಗ್ರಿಕಲ್‌ಚರಲ್ ಡೆಬ್ಟರ್ಸ್ ರೀಲಿಫ್ ಆಕ್ಟ್ ಪ್ರಕಾರ ಅವರಿಗೆ ರಕ್ಷಣೆ ಇತ್ತು. ಮೈಸೂರು ಅಗ್ರಿಕಲ್‌ಚರಲ್ ಡೆಬ್ಟರ್ಸ್ ರಿಲೀಫ್ ಆಕ್ಟ್ ರದ್ದು

ಆಗಿರುವುದರಿಂದ ಅವರಿಗೆ ಯಾವ ವಿಧವಾದ ರಕ್ಷಣೆಯೂ ಇಲ್ಲ. The Mysore Agricultural Debtors Relief Act 1966 was struck down by the Mysore High Court as unconstitutional. ಈವಾಗ ಈ ಅಪೀಲು ಸುಪ್ರೀಂಕೋರ್ಟಿನಲ್ಲಿ ಪೆಂಡಿಂಗ್ ಇದೆ. ಈವೊತ್ತಿನ ದಿವಸ ರೈತನನ್ನು ತುರಂಗದಲ್ಲಿ ಇಡುವುದಕ್ಕಾಗಲಿ ಅಥವಾ ಅವನಿಂದ ಹಣವನ್ನು ವಸೂಲ್ಮಾಡುವುದಕ್ಕಾಗಲಿ ಆ ಅಧಿಕಾರ ಕೋರ್ಟು ಮತ್ತು ಸಾಹುಕಾರರ ಹತ್ತಿರ ಇದೆ. ಈ ದೃಷ್ಟಿಯಿಂದ ಈ ಮಸೂದೆಯಲ್ಲಿ ತಿದ್ದುಪಡಿ ಮಾಡಿ ಕೇವಲ ಜಮೀನುಗಳನ್ನು ವಿಕ್ರಯ ಮಾಡುವ ಸಮಯದಲ್ಲಿ ಮಾತ್ರ ಅವನಿಗೆ ತಡೆ ಆಜ್ಞೆ ಕೊಟ್ಟಿದೆ. ರೈತನ ವಿರುದ್ಧ ಇದ್ದ ಹುಕುಂಗಳನ್ನು ಸ್ಟೇ ಮಾಡುವ ಅಧಿಕಾರ ಈ ಕಾಯಿದೆಯಲ್ಲಿ ಕೊಟ್ಟಿದೆ. ಈ ಹುಕುಂನ್ನು ಎಕ್ಸಿಕ್ಯೂಟ್ ಮಾಡಬಾರದು ಎಂದು ಆ ರೀತಿ ಹುಕುಂನ್ನು ದೊರಕಿಸಿ ಕೊಟ್ಟು ೨ ವರ್ಷ ಮುಂದುವರಿಸಬಾರದು ಎಂದು ಮಾಡಿದ್ದಾರೆ. ಈ ರೀತಿ ಇದರಲ್ಲಿ ತಿದ್ದುಪಡಿ ಮಾಡಿರುವುದರಿಂದ ಮುಂದೆ ಅವನಿಗೆ ಯಾವುದಾದರೂ ಒಂದು ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಮಯದಲ್ಲಿ ನಾನು ಸಲಹೆ ಮಾಡಬಯಸುತ್ತೇನೆ.

ರೈತನಿಗೆ ಅರ್ಬನ್ ಬ್ಯಾಂಕಿನಲ್ಲಿ ಸಾಲ ದೊರೆಯುವ ವ್ಯವಸ್ಥೆಯಾಗಬೇಕು. ಅರ್ಬನ್ ಬ್ಯಾಂಕುಗಳು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದ್ದು ಅವುಗಳಿಂದ ಕೇವಲ ವ್ಯಾಪಾರಿ ಜನಗಳಿಗೆ ಸಾಲ ಸಿಕ್ಕುತ್ತಿದೆ. ಇನ್ನುಮುಂದೆ ಸಹಕಾರ ಮಂತ್ರಿಗಳು ಯಾವತ್ತು ಅರ್ಬನ್ ಬ್ಯಾಂಕುಗಳಿಗೆ ಹುಕುಂ ಮಾಡಿ ರೈತರಿಗೆ ಅಡಚಣಿ ಇದ್ದ ಸಮಯದಲ್ಲಿ ಸಾಲವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇನೆ.

ಈ ರೀತಿಯಿಂದ ವಿಚಾರ ಮಾಡಿ ಯಾವತ್ತೂ ಪರಿಹಾರಗಳನ್ನು ರೈತರಿಗೆ ಎರಡು ವರ್ಷದ ವರೆಗೆ ದೊರೆಯುವಂತೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಅದೇ ಪ್ರಕಾರವಾಗಿ ಸಾಹುಕಾರಿ ಜನರು ಆದಷ್ಟೂ ಸುಪ್ರೀಂ ಕೋರ್ಟಿನಲ್ಲಿದ್ದ ರಿಟ್ ಪಿಟಿಷನ್ ಅಪೀಲ್ ಮುಂದಕ್ಕೆ ಹೋಗುವಂತೆ, ಡಿಲೇ ಆಗುವಂತೆ ಪ್ರಯತ್ನ ಮಾಡುತ್ತಿರುತ್ತಾರೆ. ಈ ಸಮಯದಲ್ಲಿ ಸರ್ಕಾರದವರು ಜಾಗೃತರಾಗಿ ಸುಪ್ರೀಂ ಕೋರ್ಟಿನಲ್ಲಿ ತಜ್ಞ ಅಡ್ವೋಕೇಟ್‌ರನ್ನು ನೇಮಕಮಾಡಿ ಎಕ್ಸ್‌ಪೆಡೈಟ್ ಮಾಡಿ, ಈ ಕಾಯದೆ ಕ್ರಮಬದ್ಧವಿವೆ ಎಂದು ಜಾಹೀರು ಮಾಡಿಸಬೇಕೆಂದು ಸೂಚಿಸ ಬಯಸುತ್ತೇನೆ.

ರೈತರಿಗೆ ಕೂಡಲೇ ಪರಿಹಾರ ಸಿಕ್ಕಬೇಕು, ಅವರ ಜಮೀನುಗಳು, ಆಸ್ತಿಗಳು ಉಳಿಯಬೇಕು, ಮತ್ತು ದುಷ್ಕಾಲದಿಂದ ಸಂತ್ರಸ್ತರಾದ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕುವುದು ಅತ್ಯವಶ್ಯವಿದೆ. ಆ ದೃಷ್ಟಿಯಿಂದ ರೈತನ ವ್ಯಾಖ್ಯೆಯಲ್ಲಿ ಕೆಲವು ಕಂಡೀಷನ್ಸ್ ಹಾಕಿ ಸಣ್ಣ ರೈತರಿಗೂ ಪರಿಹಾರ ದೊರಕುವಂತೆ ಈ ಕಾಯದೆಯಲ್ಲಿ ಮಾಡುವುದು ಅತ್ಯವಶ್ಯವಿದೆ. ಯಾವತ್ತೂ ರೈತರಿಗೆ ಪರಿಹಾರ ಸಿಕ್ಕಬೇಕು. ಆ ಪ್ರಕಾರವಾಗಿ ಕಾಯದೆಯಲ್ಲಿ ದುರಸ್ತಿ ಮಾಡಿ ರೈತರಿಗೆ ಯಾವತ್ತೂ ಪರಿಹಾರಗಳು ಸಿಕ್ಕಬೇಕು.

ಈಗಾಗಲೇ ಡಿಕ್ರಿ ಆಗಿರುವುದನ್ನು ತಡೆಹಿಡಿಯಬೇಕು. ರೈತರ ವಿರುದ್ಧವಾಗಿ ಚಾಲೂ ಇದ್ದ ಪೆಂಡಿಂಗ್ ಪ್ರೊಸೀಡಿಂಗ್ಸ್ ತಡೆಹಿಡಿಯಬೇಕು. ಇನ್ನು ಮುಂದೆ ಆಗತಕ್ಕ ಡಿಕ್ರಿಗಳನ್ನಾದರೂ ಕೂಡ ಜಾರಿಯಲ್ಲಿ ತರದ ಹಾಗೆ ಎರಡು ವರ್ಷ ಕಾಲವಾದರೂ ತಡೆಹಿಡಿಯುವಂತೆ ಸೂಕ್ತ ತಿದ್ದುಪಡಿ ಮಾಡಿ ರೈತರಿಗೆ ಪರಿಹಾರ ಕೊಡಬೇಕೆಂದು ಸರ್ಕಾರಕ್ಕೆ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ದಿವಸ ಬಂದಿರತಕ್ಕ ಅಗ್ರಿಕಲ್ಚರಲ್ ಡೆಬ್ಟರ್ಸ್ ಟೆಂಪೊರರಿ ಪ್ರೊಟೆಕ್ಷನ್ ಬಿಲ್ ವಿಷಯದಲ್ಲಿ ಮಾತನಾಡುತ್ತ ಇಲ್ಲಿಯವರೆಗೆ ಮಾತನಾಡಿರತಕ್ಕ ನಮ್ಮ ಸ್ನೇಹಿತರುಗಳು ಕೆಲವರು ವಿರೋಧಿಸಿದ್ದಾರೆ, ಕೆಲವರು ಸ್ವಾಗತಿಸಿದ್ದಾರೆ. ಈ ಹೊತ್ತಿನದಿವಸ ಈ ಕಾನೂನನ್ನು ತರತಕ್ಕದ್ದು ಒಂದು ವಿಧದಲ್ಲಿ ಕ್ಷೇಮವಾಗಿ ಕಂಡರೂ ಇನ್ನೊಂದು ವಿಧದಲ್ಲಿ ಜನಗಳಿಗೆ ಅದರಿಂದ ಅನ್ಯಾಯವಾಗುತ್ತದೆ ಎಂದರೆ ತಪ್ಪಾಗಲಾರದು. ಈ ಹೊತ್ತಿನ ದಿವಸ ನಾವು ಈ ಬಿಲ್ಲನ್ನು ತಂದ ತಕ್ಷಣ ಜನಗಳಿಗೆ ಏನೊಂದು ಸೌಲಭ್ಯ ತಾತ್ಕಾಲಿಕವಾಗಿ ಅವರ ಕಷ್ಟನಷ್ಟಗಳನ್ನು ನೀಗಿಕೊಳ್ಳುವುದಕ್ಕೆ ಒಂದು ಸಹಾಯ, ಹಣವನ್ನು ಇಟ್ಟುಕೊಂಡಿರತಕ್ಕ ಜನಗಳಿಂದ ಸಿಕ್ಕುತ್ತಿತ್ತೋ ಅದು ತಕ್ಷಣ ನಿಂತು ಹೋಗುತ್ತದೆ. ಹಾಗೆ ನಿಂತುಹೋದಾಗ ಕಷ್ಟ ಪರಿಸ್ಥಿತಿಯಲ್ಲಿರುವ ಜನಗಳಿಗೆ ಬೇರೆ ಜನತೆ ಸಹಾಯ ಮಾಡುವುದಕ್ಕೆ ಬರುತ್ತಾರೆಯೇ ಎಂದರೆ ನಿಜವಾಗಿ ಯಾರೂ ಬರುವುದಿಲ್ಲ. ನಮ್ಮ ಸರ್ಕಾರದಲ್ಲಿ ನಾವು ಸಾಲವನ್ನು ಪಡೆಯುವುದಕ್ಕೆ ಹೋದರೆ ಎಷ್ಟು ಕಷ್ಟಗಳಿವೆ ಎನ್ನುವುದನ್ನು ಅನೇಕ ಸಾರಿ ಹೇಳಿದ್ದೇವೆ. ಒಬ್ಬ ಸಾಹುಕಾರನ ಹತ್ತಿರ ಹೋಗಿ ಕಾಗದ ಬರೆದು ಕೊಡುವುದಕ್ಕೆ ತಡವಾದರೂ ಕೂಡ ಅಥವಾ ಕಾಗದಪತ್ರವಿಲ್ಲದೆಯೇ ಎಷ್ಟೋ ಜನರು ಲೇವಾದೇವಿ ಮಾಡುತ್ತಿದ್ದರು, ಬರೀ ನಂಬಿಕೆಯ ಮೇಲೆ ಸಾಲ ಕೊಡುತ್ತಿದ್ದರು. ಕಾನೂನು ಪರಿಸ್ಥಿತಿ ಕ್ಲಿಷ್ಟವಾಗಿ ಈ ಹೊತ್ತು ಜನಗಳಿಗೆ ಕಷ್ಟ ಜಾಸ್ತಿಯಾಗುತ್ತಿದೆ. ಕಾಗದ ಬರೆದು ಕೊಟ್ಟರೂ, ಪತ್ರಗಳನ್ನು ಬರೆದುಕೊಟ್ಟರೂ ಕೊಟ್ಟ ಸಾಲ ವಾಪಸು ಬಾರದೆ ಇರತಕ್ಕ ಕಾಲದಲ್ಲಿ ನಂಬಿಕೆ ಸಾಲವನ್ನು ಕೊಡುವುದು ಹೇಗೆ ಎನ್ನುವ ಪರಿಸ್ಥಿತಿ ಉಂಟಾಗಿದೆ. ಜನಗಳಿಗೆ ತಾತ್ಕಾಲಿಕವಾಗಿ, ತಕ್ಷಣಕ್ಕೆ ಬೇಕಾದ ಹಣ ದೊರಕುತ್ತಿಲ್ಲ. ಸಹಕಾರ ಸಂಘಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಸಾಲ ಪಡೆಯುವುದಕ್ಕೆ ಹೋದರೆ ಅಲ್ಲಿ ನಾವು ಮಾಡಬೇಕಾದ ರಿಕಾರ್ಡ ಕಾನೂನು ಪ್ರಕಾರವಾಗಿ ಮಾಡದೆ ಹೋದರೆ ಹಣ ಸಿಕ್ಕುವುದಿಲ್ಲ. 'ಮಗನ ಮದುವೆ ಯಮನ ಬಾಧೆ' ಎಂದು ಹೇಳುತ್ತಾರೆ. ಮದುವೆ ನಿಶ್ಚಯ ಮಾಡಿಕೊಂಡು ಬಂದು ಸಾಲ ಸಿಕ್ಕದೆ ಒದ್ದಾಡುವ ಪರಿಸ್ಥಿತಿ ಯುಂಟಾಗುತ್ತದೆ. ಎಲ್ಲಿಯಾದರೂ ಸಾಲಮಾಡಿ ತನ್ನ ಕಷ್ಟವನ್ನು ಪರಿಹಾರ ಮಾಡಿಕೊಳ್ಳೋಣವೆಂದು ಕೈ ಒಡ್ಡಿದರೆ ಸಾಲ ಸಿಕ್ಕುವುದಿಲ್ಲ, ಏಕೆಂದರೆ ಕಾನೂನು ಇರುವುದರಿಂದ ಆ ತೊಂದರೆ ಇದೆ. ರೈತನಿಗೆ ತಾತ್ಕಾಲಿಕವಾಗಿ ಅವನಿಗೆ ಕಷ್ಟ ಪರಿಸ್ಥಿತಿ ಬಂದಾಗ ಅವನಿಗೆ ಹಣವನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಎಲ್ಲಿಯವರೆಗೆ ಸಾಧ್ಯ

ವಿಲ್ಲವೋ ಅಲ್ಲಿಯವರೆಗೆ ಇಂಥ ಮಸೂದೆಗಳನ್ನು ತರತಕ್ಕದ್ದು ಕ್ಷೇಮವೆಂದು ನಾನು ಹೇಳುವುದಿಲ್ಲ. ಆ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮಾಡಿ ಆನಂತರ ಈ ಕಾನೂನನ್ನು ತಂದರೆ ಸರಿಹೋಗುತ್ತದೆ.

ಈ ಹೊತ್ತು ಸರ್ಕಾರದಲ್ಲಿ ಸಾಲ ಮಾಡಿದರೆ ಅಸಲಿಗಿಂತ ಸುಸ್ತಿ ಬಡ್ಡಿ ಜಾಸ್ತಿಯಾಗುತ್ತದೆ. ಮಳೆ ಇಲ್ಲ, ಬೆಳೆ ಹೋಯಿತು ಎಂದು ಸಾಹುಕಾರರ ಹತ್ತಿರ ಸಾಲ ಮಾಡಿದಾಗ ಹೇಳಿದರೆ ನಾಲ್ಕೈದು ಜನ ಕುಳಿತುಕೊಂಡು ಪಂಚಾಯಿತಿ ಮಾಡಿ ಇಷ್ಟು ಬಡ್ಡಿ ಬಿಡು, ಇಷ್ಟು ತೆಗೆದುಕೋ ಎಂದು ಹೇಳಿ ಒಂದು ತಿರ್ಮಾನಕ್ಕೆ ಬರುತ್ತಿದ್ದರು. ಸರ್ಕಾರದಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸರ್ಕಾರದಲ್ಲಿ ಸಾಲ ತೆಗೆದುಕೊಂಡಿದ್ದು ಮಳೆ ಬೆಳೆ ಇಲ್ಲದೆ ನಾಲ್ಕಾರು ವರ್ಷ ಸಾಲ ವಾಪಸು ಕೊಡುವುದಕ್ಕೆ ಆಗದೆ ಹೋದರೆ ಸುಸ್ತಿ ಬಡ್ಡಿ ಬಡ್ಡಿಗೆ ಬಡ್ಡಿ ಸೇರಿ, ಆ ಹಣಕ್ಕಾಗಿ ಅವನ ಆಸ್ತಿಯನ್ನು ಹರಾಜು ಮಾಡುತ್ತಿರತಕ್ಕ ಪರಿಸ್ಥಿತಿಯನ್ನು ನಾವೆಲ್ಲ ನೋಡುತ್ತಿರುತ್ತೇವೆ. ಭೂ ಅಭಿವೃದ್ಧಿ ಬ್ಯಾಂಕಿನಿಂದ ೧೯೬೧--೬೨ ರಲ್ಲಿ ಸಾಲ ಪಡೆದಿದ್ದು, ಮಳೆಬೆಳೆಗಳಿಲ್ಲದೆ ಸಾಲದ ಮೇಲೆ ಬಡ್ಡಿಗೆ ಬಡ್ಡಿ ಬೆಳೆದು ರೈತರು ಬಹಳ ತೊಂದರೆಗೆ ಈಡಾಗಿದ್ದಾರೆ. ಮಳೆಬೆಳೆಗಳಾಗದೆ ಇದ್ದರೆ ರಿಯಾಯಿತಿಯನ್ನು ಕೊಡುತ್ತೇವೆ, ಪೀನಲ್ ಇಂಟರೆಸ್ಟ್ ಕೊಡಬೇಕಾಗಿಲ್ಲ ಎಂದು ಹೇಳುವುದೆಲ್ಲ ವಿಧಾನಸಭೆಯಲ್ಲಿ ಚರ್ಚೆ ನಡೆದಾಗ ಹೇಳುವುದು ಮತ್ತು ಆ ವಿಚಾರ ಪತ್ರಿಕೆಗಳಲ್ಲಿ ಬರತಕ್ಕ ವಿಷಯವಾಗಿದೆ. ಆದರೆ ಕಾರ್ಯರೂಪಕ್ಕೆ ಬಂದಿಲ್ಲ. ಯಾವ ವರ್ಷ ಮಳೆಯಾಗಿಲ್ಲ ಆ ವರ್ಷಕ್ಕೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಹಾಕಬಾರದು. ಆದರೂ ಸಹ ಬಡ್ಡಿ, ಸುಸ್ತಿ ಬಡ್ಡಿ ಹಾಕಿ, ಟಾಂ ಟಾಂ ಹೊಡೆದು ಅವನ ಮನೆಯಲ್ಲಿರುವ ಪಾತ್ರೆ, ಪದಾರ್ಥ, ದನಕರುಗಳು ಇವನ್ನೆಲ್ಲ ಹರಾಜು ಹಾಕಿ ದುಡ್ಡನ್ನು ವಸೂಲು ಮಾಡತಕ್ಕದ್ದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಜನ ಕಣ್ಣೀರಿಟ್ಟುಕೊಂಡು ಏನು ಪರಿಸ್ಥಿತಿಗೆ ಸಿಕ್ಕಿದೆವು, ಆ ಹೊತ್ತು ಸಾಲ ತೆಗೆದುಕೊಳ್ಳದೆ ಇದ್ದರೆ ಚೆನ್ನಾಗಿರ್ತಿತ್ತೋ ಏನೋ ಎಂದು ಹೇಳುತ್ತ ನರಳುತ್ತಿದ್ದಾರೆ. ಸರ್ಕಾರ ಸುಸ್ತಿ ಬಡ್ಡಿಯನ್ನು ತೆಗೆದುಹಾಕಬೇಕು. ಇಲ್ಲದೆಹೋದರೆ ಸಾಹುಕಾರನಿಗಿಂತ ಸರ್ಕಾರದ ಸಾಲದಿಂದ ಕಷ್ಟವಾಗಿರುವ ಪರಿಸ್ಥಿತಿ ಬರುತ್ತದೆ. ಸುಸ್ತಿ ಬಡ್ಡಿ ಏನಿದೆ ಅದನ್ನು ದಯವಿಟ್ಟು ಸರ್ಕಾರದವರು ಇನ್ನುಮುಂದಾದರೂ ವಜಾ ಮಾಡಿ ಜನಗಳಿಗೆ ಅನುಕೂಲವಾಗತಕ್ಕ ವ್ಯವಸ್ಥೆಯನ್ನು ಮಾಡದೆ ಹೋದರೆ ಬಹಳ ಕಷ್ಟ ಪರಿಸ್ಥಿತಿ ಬರುತ್ತದೆ.

ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಸರ್ವರಿಗೂ ಹಣವನ್ನು ಕೊಡುತ್ತೇವೆಂದು ಹೇಳಿದರು. ಬ್ಯಾಂಕುಗಳಿಂದ ಕೊಟ್ಟ ಸಾಲ ವಾಪಸು ಬರುತ್ತಿಲ್ಲ. ಫಿಕ್ಸೆಡ್ ಡಿಪಾಜಿಟ್ ಹಣಕ್ಕೆ ಕಡಮೆ ಹಣವಿರುವುದರಿಂದ ಸಾಲ ಕೊಡುವುದಕ್ಕಾಗುವುದಿಲ್ಲವೆಂದು ಬ್ಯಾಂಕುಗಳವರು ಹೇಳುತ್ತಿದ್ದಾರೆ. ರೈತನಿಗೆ ಎಲ್ಲ ಕಷ್ಟಗಳಿಗೂ ಸಹಾಯ ಮಾಡಲು ಸಾಲ ಕೊಡುವ ಸೌಲಭ್ಯದ ವ್ಯವಸ್ಥೆ ಮಾಡುವವರೆಗೂ, ರೈತನಿಗೆ ತಕ್ಷಣ ಹಣ ಬೇಕು ಎಂದಾಗ ತನ್ನಲ್ಲಿರುವ ಪಟ್ಟೆಯನ್ನು ತೆಗೆದುಕೊಂಡು ಹೋಗಿ ಕೊಟ್ಟ

ತಕ್ಷಣ ಹಣ ದೊರೆಯುತಕ್ಕ ವ್ಯವಸ್ಥೆಯಾಗುವವರೆಗೂ ಈ ಮಸೂದೆಯನ್ನು ತರತಕ್ಕದ್ದು ಕ್ಷೇಮಕರವಲ್ಲವೆಂದು ಹೇಳುತ್ತೇನೆ. ಸರ್ಕಾರದ ಸಾಲಗಳ ವ್ಯವಸ್ಥೆ 'ತಲೆಗಿಂತ ಏನೋ ಭಾರ' ಎಂದು ಹೇಳುವ ಮಟ್ಟಕ್ಕೆ ಹೋಗುತ್ತಿದೆ. ಆದುದರಿಂದ ಸರ್ಕಾರದ ಸಾಲ ಪರಿಸ್ಥಿತಿ ಬಹಳ ಉಲ್ಬಣವಾಗುತ್ತಿದೆ. ಅದನ್ನು ಕಡಿಮೆ ಮಾಡ ಬೇಕಾದರೆ ಸುಸ್ತಿ ಬಡ್ಡಿಯನ್ನು ಹಾಕದೆ ಅಸಲು ಮತ್ತು ಬಡ್ಡಿ ಮಾತ್ರ ತೆಗೆದು ಕೊಳ್ಳತಕ್ಕ ಪದ್ಧತಿ ಜಾರಿಗೆ ಬರಬೇಕು. ಸುಸ್ತಿ ಬಡ್ಡಿಯನ್ನು ಸೇರಿಸಿ ಹರಾಜು ಮಾಡುವುದಾದರೆ ಮುಲ್ತಾನಿ ಅಥವಾ ಮಾರವಾಡಿಗಳ ಮಟ್ಟಕ್ಕೆ ಬಂದಂತಾಗುತ್ತದೆ.

ಈ ಉತ್ತಮವಾದ ಬಿಲ್ಲನ್ನು ನಾನು ಸ್ವಾಗತಿಸುವುದಾದರೂ, ಕೂಡ ಕೆಲವು ಕಾಲ ವ್ಯವಸ್ಥಿತವಾದ ರೀತಿಯಲ್ಲಿ ಸಾಕಷ್ಟು ಸಾಲದ ಸೌಲಭ್ಯ ಕೊಡುವ ಶಕ್ತಿ ಸರ್ಕಾರಕ್ಕೆ ಬರುವವರೆಗೂ ಇದನ್ನು ತಡೆ ಹಿಡಿದು ಆ ನಂತರ ಜಾರಿಗೆ ತರಬೇಕೆಂದು ಮನವಿ ಮಾಡುತ್ತ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

†ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಸರಕಾರ ಇಲ್ಲಿ ತಂದಿರುವ ಮೈಸೂರು ಅಗ್ರಿಕಲ್ಚರಲ್ ಡೆಟ್ಟರ್ಸ್ ರಿಲೀಫ್ ಬಿಲ್ ೧೯೭೩ ಎನ್ನುವ ಬಿಲ್ಲನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಈ ಬಿಲ್ಲು ಬಹಳ ಹಿಂದೆಯೇ ಇಲ್ಲಿ ಜಾರಿಗೆ ಬರಬೇಕಾಗಿತ್ತು. ಇದರಲ್ಲಿ ಮೈಸೂರು ಹೈ ಕೋರ್ಟಿನವರು ೧೯೭೬ ರಲ್ಲಿ ಮಾಡಿದ ಕಾನೂನನ್ನು ಅನೂರ್ಜಿತಗೊಳಿಸಿದುದ ರಿಂದ ರಾಜ್ಯದಲ್ಲಿರುವ ಲಕ್ಷಾಂತರ ಮಂದಿ ರೈತರಿಗೆ ತೊಂದರೆಯಾಗುತ್ತದೆ ಎಂದು ಅವರಿಗೆ ಅನುಕೂಲ ಮಾಡಲು ಇಂತಹ ಒಂದು ಕಾನೂನು ತರಬೇಕಾಯಿತು ಎಂದು ಇದರಲ್ಲಿ ಹೇಳಿದ್ದಾರೆ. ಆದರೆ ಹಿಂದೆ ಇದ್ದ ಮಸೂದೆಯಲ್ಲಿ ಇದ್ದ ಎಲ್ಲ ಅನು ಕೂಲಗಳನ್ನು ಬಿಟ್ಟು ಇದರಲ್ಲಿ ಒಂದು ಭಾಗ ಮಾತ್ರ ಸೇರಿಸಿ ತಂದಿದ್ದಾರೆ. ಹಿಂದೆ ರೈತರಿಗೆ ಅನುಕೂಲವಾಗುವಂತಹ ಇದ್ದ ಅನೇಕ ವಿಚಾರಗಳನ್ನೂ ಇದರಲ್ಲಿ ಅಳವಡಿಸಿ ತಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಅಭಿಪ್ರಾಯ. ಮತ್ತು ರೈತರಿಗೆ ಇದರಿಂದ ಬಹಳ ಉತ್ತಮವಾಗುತಲಿತ್ತು. ರೈತರ ಹಿತದೃಷ್ಟಿಯಿಂದ ನಾನು ಇಲ್ಲಿ ಹೇಳುವುದು ಸಾವಿರ ರೂಪಾಯಿ ವರಮಾನ ಬರುವ ರೈತ ಯಾವುದಾದರೂ ಸಾಲಕ್ಕೆ ಡಿಕ್ರಿ ಸಿವಿಲ್ ಕೋರ್ಟಿನಲ್ಲಿ ಪಡೆದರೂ ಅದಕ್ಕೆ ಎಂಟು ವರ್ಷಗಳ ಕಾಲ ಅವಕಾಶ ಇರು ತ್ತಿತ್ತು. ಮತ್ತು ಇದರಿಂದ ರೈತರ ಆಸ್ತಿಯನ್ನು ಅಟ್ಯಾಚು ಮಾಡಲು ಅವಕಾಶ ವಿರುತ್ತಿರಲಿಲ್ಲ. ಮತ್ತು ರೈತರು ಕೊಡಬೇಕಾದ ಸಾಲಕ್ಕೆ ಕೋರ್ಟಿಗೆ ಹೋದರೂ ಅದಕ್ಕೆ ಆರು ವರ್ಷ ಕಾಲ ಲಿಮಿಟೇಷನ್ ಆಗುತ್ತೆ ಎಂದೂ ಇತ್ತು. ಇದರಿಂದ ರೈತರಿಗೆ ಅನುಕೂಲಗಳಾಗುತ್ತಿತ್ತು. ಆದರೆ ಇದುವರೆಗೆ ರೈತರಿಗೆ ನಿರೀಕ್ಷಿಸಿದ ಮಟ್ಟ ದಲ್ಲಿ ಯಾವ ಅನುಕೂಲಗಳೂ ಆಗಲಿಲ್ಲ. ಈ ಮಸೂದೆಯಲ್ಲಿರುವ ಪ್ರಕಾರ ಇವರು ಹೇಳುವುದು:

> "Stay of proceedings in the case of certain decrees or orders.— Notwithstanding anything contained in any law or judgement or order of any court or competent authority, all proceedings in execution of any decree or order of any court or competent authority for the sale of any land held by an agricultural debtor for realisation of any debt due by him shall, for a period of two years from the commencement of this Act, be stayed."

ಎಂದು ಇದರಲ್ಲಿ ಹೇಳಿದ್ದಾರೆ. ಮತ್ತು ಇದರಲ್ಲಿ ಎರಡು ವರ್ಷಗಳ ಅವಕಾಶ ಇರಬೇಕೆಂದು ಮಾಡಿದ್ದಾರೆ. ಹಿಂದೆ ಇದ್ದ ಮಸೂದೆಯಲ್ಲಿ ರೈತರಿಗೆ ಇದ್ದ ಚರ ಹಾಗೂ ಸ್ಥಿರ ಆಸ್ತಿಗಳನ್ನು ಹರಾಜು ಹಾಕಿ ಅವರಿಂದ ಸಾಲವನ್ನು ವಸೂಲು ಮಾಡುತ್ತಿದ್ದರು. ಇಂತಹ ರೈತರಿಗೆ ಯಾವ ವಿಧವಾದ ಸಹಾಯವನ್ನೂ ಮಾಡಿಕೊಟ್ಟಿಲ್ಲ. ಇಂದು ರೈತರಿಗೆ ನಿರೀಕ್ಷಿಸಿದ ಮಟ್ಟದಲ್ಲಿ ಯಾವ ಸಹಾಯವೂ ದೊರಕುತ್ತಿಲ್ಲ. ಈ ಮಸೂದೆ ಬರೀ ಸಿವಿಲ್ ಕೋರ್ಟಿಗೆ ಸೇರಿದ ಡಿಕ್ರಿಗಳಿಗೆ ಮಾತ್ರ ಅನ್ವಯವಾಗುತ್ತೋ ಇಲ್ಲವೇ ಕೋ ಆಪರೇಟಿವ್ ಇಲಾಖೆ ಮೂಲಕ ತೆಗೆದುಕೊಂಡಿರುವ ಸಾಲಗಳಿಗೂ ಇದು ಅನ್ವಯವಾಗುತ್ತದೆಯೋ ಇದರ ಬಗ್ಗೆ ನಮ್ಮ ಮಾನ್ಯ ಸಹಕಾರ ಸಚಿವರು ನಿರ್ದಿಷ್ಟವಾಗಿ ಇಲ್ಲಿ ತಿಳಿಸಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇದರಲ್ಲಿ ಹೇಳಿರುವಂತೆ ಸಿವಿಲ್ ಕೋರ್ಟುಗಳ ಡಿಕ್ರಿಗಳಿಗೆ ಅನ್ವಯವಾಗುವಂತೆ ಸಹಕಾರ ಇಲಾಖೆಯ ಮೂಲಕ ಸಾಲಗಳನ್ನು ಪಡೆದಿರುವ ರೈತರಿಗೂ ಇದು ಅನ್ವಯವಾಗುವಂತೆ ಮಾಡುವುದೊಳ್ಳೆಯದು. ಇಂದು ನಾವು ಸಹಕಾರ ಇಲಾಖೆಯಲ್ಲಿರುವ ಅಧಿಕಾರಿಗಳು ಅವರಿಗೆ ಕೊಡಬೇಕಾದ ಸಾಲಕ್ಕಾಗಿ ರೈತರ ಹತ್ತಿರ ಇದ್ದ ಎತ್ತು ಹಾಗೂ ಅವರ ಮನೆ ಪಾತ್ರೆ ಇತ್ಯಾದಿ ಎಲ್ಲವನ್ನೂ ಹರಾಜು ಹಾಕಿ ಸಾಲಗಳಿಗಾಗಿ ವಸೂಲು ಮಾಡಿಕೊಂಡಿರುತ್ತಾರೆ. ಆದುದರಿಂದ ಇದರಲ್ಲಿ ಯಾವ ರೀತಿಯಾಗಿ ಸಿವಿಲ್ ಕೋರ್ಟ್‌ಗಳಿಗೆ ಇದು ಅಪ್ಲೈ ಆಗುತ್ತೋ ಅದೇ ರೀತಿ ಕೋ ಆಪರೇಟಿವ್ ಡಿಪಾರ್ಟ್‌ಮೆಂಟು ಮೂಲಕ ತೆಗೆದುಕೊಂಡ ಸಾಲಗಳಿಗೂ ಇದು ಅಪ್ಲೈ ಆಗುವಂತೆ ಮಾಡಬೇಕೆಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇಂದು ಲಕ್ಷಾಂತರ ಮಂದಿ ರೈತರುಗಳು ಸಹಕಾರ ಇಲಾಖೆಯ ಮೂಲಕವಾಗಿಯೇ ಹೆಚ್ಚು ಸಾಲಗಳನ್ನು ಪಡೆದು ಅದನ್ನು ವಾಪಸು ಕೊಡಲು ಶಕ್ತಿ ಇಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಇದರಿಂದ ಅವರ ಚರ ಹಾಗೂ ಸ್ಥಿರ ಆಸ್ತಿಗಳು ಹರಾಜಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬೇರೆ ಯಾವ ಅನುಕೂಲಗಳನ್ನು ಸರಕಾರ ಮಾಡಿಕೊಡಲು ಇಲ್ಲಿ ತರದೇ ಇದ್ದರೂ ಇದರಲ್ಲಿ ತಂದಿರುವಂತೆ ಸಿವಿಲ್ ಕೋರ್ಟುಗಳ ಡಿಕ್ರಿಗೆ ಅನ್ವಯವಾಗುವಂತೆ ಸಹಕಾರ ಇಲಾಖೆಯ ಸಾಲಗಳಿಗೂ ಇದು ಅನ್ವಯವಾಗುವಂತೆ ಮಾಡಬೇಕು ಕಳೆದ ಎರಡು ವರ್ಷಗಳ ಹಿಂದೆ ಯಾವ ಆಕ್ಟ್ ಇತ್ತೋ ಅದನ್ನು ನಾನು ಇಲ್ಲಿ ಚರ್ಚೆ ಮಾಡುತ್ತಿಲ್ಲ, ಸರಕಾರ ರೈತರ ಅಸಹಾಯಕತೆಯನ್ನು ತಿಳಿದುಕೊಂಡು ಇಷ್ಟು

ಸಹಾಯವನ್ನು ಮಾಡಲು ಇಲ್ಲಿ ಒಂದು ಮಸೂದೆ ತಂದಿದ್ದಾರೆ ಮತ್ತು ಇದರಿಂದ ರೈತರಿಗೆ ತೊಂದರೆಯಾಗಬಾರದು ಎಂದು ಮಾಡಿದ್ದಾರೆ. ಮುಂದೆ ರಾಜ್ಯ ಸರಕಾರ ನಾನು ಹೇಳಿರುವ ಎಲ್ಲ ವಿಚಾರಗಳನ್ನೂ ಗಮನಕ್ಕೆ ತೆಗೆದುಕೊಂಡು ಒಂದು ಸಮಗ್ರವಾದ ಸಹಕಾರ ಮಸೂದೆಯನ್ನು ಇಲ್ಲಿ ತಂದು ರೈತರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟಿದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ-

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ ಸಚಿವರು ಏನೊಂದು ಹೊಸ ಮಸೂದೆ ಮಂಡಿಸಿದ್ದಾರೆ. ಇದರಿಂದ ರೈತರ ಋಣಭಾರವನ್ನು ಕಡಿಮೆ ಮಾಡಲು ಇದರಲ್ಲಿ ಹಿಂದೆ ಒಂದು ಮಸೂದೆ ಮಾಡಿದ್ದರು. ಆ ಕಾಯಿದೆ ಅನ್‌ಕಾನ್‌ಸ್ಟಿಟ್ಯೂಷನಲ್ ಎಂದರೆ ರಾಜ್ಯಾಂಗಕ್ಕೆ ವಿರೋಧವಾದುದು ಎಂದು ಮೈಸೂರು ಹೈ ಕೋರ್ಟಿನವರು ಒಂದು ತೀರ್ಪು ಕೊಟ್ಟರು. ಇದರ ಮೇಲೆ ರಾಜ್ಯ ಸರಕಾರದವರು ಇಂದು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಸಲ್ಲಿಸಿದ್ದಾರೆ. ಇದರ ಬಗ್ಗೆ ಇನ್ನೂ ಅಂತಿಮ ತೀರ್ಪು ಬರಲಿಲ್ಲ. ಇದಕ್ಕಾಗಿ ಇಲ್ಲಿ ಇಂತಹ ಒಂದು ಮಸೂದೆ ತಂದು ಸಿವಿಲ್ ಕೋರ್ಟುಗಳಲ್ಲಿ ಆಗಿರುವ ಡಿಕ್ರಿಗಳ ಬಗ್ಗೆ ರೈತರ ಸಾಲವನ್ನು ವಸೂಲು ಮಾಡಕೂಡದು ಎಂದು ಇದರಲ್ಲಿ ಎಕ್ಸಿಕ್ಯೂಷನ್ ಕೇಸುಗಳನ್ನು ಎರಡು ವರ್ಷಕಾಲ ಜಾರಿಗೆ ಕೊಡಕೂಡದು ಎಂದು ತಂದಿದ್ದಾರೆ. ಎಂದರೆ ಎರಡು ವರ್ಷಕಾಲ ಇದನ್ನು ತಡೆಹಿಡಿಯಬೇಕು ಎನ್ನುವುದು ಇದರ ಉದ್ದೇಶ. ರೈತರ ಋಣ ಪರಿಹಾರ ಮಾಡಲು ಇಂತಹ ಒಂದು ಮಸೂದೆ ಈ ಸರಕಾರ ಮಾಡಿದ್ದಲ್ಲ, ಹಿಂದಿನ ಸರಕಾರವೇ ಇದನ್ನು ಮಾಡಿತ್ತು ಇದನ್ನು ಈಗ ಹೊಸದಾಗಿ ಮಂಡಿಸುತ್ತಿದ್ದಾರೆ ಅಷ್ಟೇ. ಈ ಸಂದರ್ಭದಲ್ಲಿ ಮಾನ್ಯ ಸಹಕಾರ ಸಚಿವರು ಇಂತಹ ಒಂದು ಮಸೂದೆ ತರಲು ಕಾರಣವಾದರೂ ಏನಿತ್ತು ಎನ್ನುವುದನ್ನು ಅವರು ಹೇಳಿದರು. ನಮ್ಮ ರಾಜ್ಯದಲ್ಲಿ ಮನಿ ಲೆಂಡರ್ಸ್ ಆಕ್ಟ್ ಪ್ರಕಾರ ರೈತರಿಗೆ ಸಾಲಗಳನ್ನು ಎಷ್ಟೋ ಜನರು ಕೊಡುತ್ತಿದ್ದರು. ಇದರಲ್ಲಿ ಶ್ರೀಮಂತ ವರ್ಗ ಎಂದು ಹೇಳುತ್ತಾರೆ. ನಾವೂ ಕೂಡ ಪದೇ ಪದೇ ಇದೇ ಹಾಡನ್ನೇ ಇಲ್ಲಿ ಹೇಳುತ್ತಿದ್ದೇವೆ. ಇದರಲ್ಲಿ ಶೋಷಣೆಗೆ ಒಳಗಾಗಿರುವ ವರ್ಗ ಮತ್ತು ಶೋಷಣೆ ಮಾಡುವ ವರ್ಗ ಎಂದು ನಾವೂ ಹೇಳುತ್ತಿದ್ದೇವೆ. ಈ ಸರಕಾರವೇನೂ ಈ ಕಾನೂನನ್ನು ತರಲಿಲ್ಲ. ಇದನ್ನು ಹಿಂದಿನ ಸರಕಾರವೇ ಮಾಡಿತ್ತು. ಹಿಂದೆ ಇದ್ದ ಕಾನೂನು ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂದು ಹೈ ಕೋರ್ಟಿನವರು ತೀರ್ಪು ಕೊಟ್ಟರು. ಇದರ ಮೇಲೆ ರಾಜ್ಯ ಸರಕಾರದವರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದ್ದಾರೆ. ಈ ಅಪೀಲು ಇನ್ನೂ ನಿರ್ಣಯವಾಗಿಲ್ಲ. ಎಲ್ಲರೂ ಇಲ್ಲಿ ರೈತರ ಪರಿಸ್ಥಿತಿ ಬಗ್ಗೆ ಬಹಳವಾಗಿ ಹೇಳುತ್ತಿದ್ದಾರೆ. ಈ ದೇಶದಲ್ಲಿ ರೈತರ ಸ್ಥಿತಿ ಬಹಳ ಕಷ್ಟವಾಗಿದೆ ಅವರನ್ನು ಸುಧಾರಿಸಬೇಕು ಎಂದು ರೈತರಲ್ಲಿ ಬಹಳ ಪ್ರೇಮ

ಇಟ್ಟಿರುವಂತೆ ಅವರು ಹೇಳುವ ಮಾತುಗಳಿಂದ ಭಾಸವಾಗುತ್ತದೆ. ಆದರೆ ಇದರಲ್ಲಿ ವೃತ್ತಿ ಏನೇ ಇರಲಿ ವಕೀಲರ ವೃತ್ತಿ ಮಾಡುವವರು ಇರಬಹುದು ಇಲ್ಲವೇ ಡಾಕ್ಟರು ಗಳ ವೃತ್ತಿ ಇರಬಹುದು ಎಂದು ಮಾನ್ಯ ಸದಸ್ಯರಾದ ಶ್ರೀ ಭಂಗಿಯವರೂ ರೈತರ ಬಗ್ಗೆ ಬಹಳವಾಗಿ ಹೇಳಬಹುದು. ಇವರಲ್ಲಿ ಅವರ ದೃಷ್ಟಿ ಎಲ್ಲಿ ಕೇಂದ್ರಿಕೃತವಾಗಿದೆ ಎಂದರೆ ಅದು ಬ್ಯಾಲಟ್ ಬಾಕ್ಸ್ ಕಡೆಗೆ ಅವರ ಗುರಿ, ಇಂದು ರೈತರಿಗೆ ಸಾಲ ವನ್ನು ಯಾವ ಯಾವ ತರಹದ ಜನ ಕೊಡುತ್ತಿದ್ದಾರೆ ಎನ್ನುವುದನ್ನು ನಾವು ಮೊದಲು ಸ್ವಲ್ಪ ತಿಳಿದುಕೊಳ್ಳಬೇಕು. ಹಳ್ಳಿಯಲ್ಲಿರುವ ರೈತರಿಗೆ ಪಟ್ಟಣದಲ್ಲಿನ ಶ್ರೀಮಂತರು ಸಾಲ ಕೊಡುವುದಿಲ್ಲ. ನಗರದಲ್ಲಿರುವ ಒಬ್ಬ ಶ್ರೀಮಂತರೂ ಹಳ್ಳಿ ಗಾಡಿನ ರೈತರಿಗೆ ಸಾಲ ಕೊಡುತ್ತಿಲ್ಲ. ಹಳ್ಳಿಯಲ್ಲಿರುವ ರೈತರ ಅಕ್ಕಪಕ್ಕದ ಮನೆ ಯಲ್ಲಿರುವವರು ರೈತರ ಪರಿಸ್ಥಿತಿಯನ್ನು ತಿಳಿದುಕೊಂಡು ಅವರಿಗೆ ಸಾಲ ಕೊಡತಕ್ಕ ಪದ್ಧತಿ ನಡೆದುಕೊಂಡು ಬಂದಿದೆ, ಇಂದು ನಗರಕ್ಕೆ ಒಬ್ಬ ರೈತ ಬಂದರೆ ಅವನಿಗೆ ಸಾಲ ಸಿಗಬೆಕಾದರೆ ಅವನ ಹೆಂಡತಿ ಮೈಮೇಲಿರುವ ಚಿನ್ನದ ಅಡ್ಡಿಗೆ ಕೊಟ್ಟರೆ ಅದನ್ನು ಇಟ್ಟುಕೊಂಡು ಶೆಟ್ಟರು ಸಾಲ ಕೊಡಬಹುದು, ಇಲ್ಲದೇ ಇದ್ದರೆ ನಗರಗಳಲ್ಲಿರುವ ಯಾವ ಶ್ರೀಮಂತರೂ ಹಳ್ಳಿಗಾಡಿನ ರೈತರಿಗೆ ಸಾಲ ಕೊಡುವುದಿಲ್ಲ. ಹಿಂದೆ ಇಲ್ಲೂ ಕೂಡ ರೈತರಿಗೆ ಯಾವ ರೀತಿ ಪರಿಹಾರ ಕೊಡುತ್ತಿದ್ದಾರೆ ಎನ್ನುವು ದನ್ನೂ ಹೇಳಿದ್ದಾರೆ. ಸಹಕಾರ ಸಂಘಗಳು ಒಂದನ್ನು ಬಿಟ್ಟರೆ ಬೇರೆ ಯಾರೂ ರೈತರಿಗೆ ಸಹಾಯ ಮಾಡುತ್ತಿಲ್ಲ ಮತ್ತು ಎಲ್ಲೂ ಸಾಲ ಸಿಗುವುದಿಲ್ಲ. ಇಂದು ಸಹಕಾರ ಸಂಘಗಳಲ್ಲಿ ರೈತರ ಬಗ್ಗೆ ವಿಶ್ವಾಸ ಇರುವವರೇ ಸಾಲ ಕೊಡಿಸಿ ಮುಂದೆ ಅಂತಹ ಸಂಘಗಳಿಗೆ ಟೋಪಿ ಹಾಕುವುದನ್ನು ನಾವು ನೋಡುತ್ತಿದ್ದೇವೆ. ಇಂದು ಯಾವ ರೈತರಿಗೂ ಯಾರೂ ಸಾಲ ಕೊಡುತ್ತಿಲ್ಲ. ಏನಾದರೂ ಚಿನ್ನ ಕೊಟ್ಟರೆ ಅದರ ಆಧಾರದ ಮೇಲೆ ಏನಾದರೂ ಸ್ವಲ್ಪ ಸಾಲ ಕೊಡಬಹುದು. ನನಗೆ ಇದರಲ್ಲಿ ಒಂಧು ಅನುಮಾನ ಬಂದಿದೆ, ಆದಕ್ಕಾಗಿ ನಾನು ಸಹಕಾರ ಇಲಾಖೆಯ ಸಚಿವರಲ್ಲಿ ಕೇಳುವುದು ಇಂದು ನಮ್ಮ ರಾಜ್ಯದಲ್ಲಿ ಎಷ್ಟು ಡಿಕ್ರಿ ಕೇಸುಗಳು ಎಕ್ಸಿಕೂಷನ್ ಆಗದೇ ನಿಂತಿವೆ ಎನ್ನುವ ವಿವರಗಳನ್ನು ನಮಗೆ ಒದಗಿಸಿಕೊಡಬೇಕು.

ಏಕೆಂದರೆ ರೈತರಿಗೆ ಋಣ ಪರಿಹಾರ ಒದಗಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನ ತೀರ್ಮಾನವಾಗುವವರೆಗೆ ಈ ಒಂದು ಕಾನೂನನ್ನು ಮಾಡಿದರೆ ಅವರಿಗೆ ಪರಿಹಾರ ದೊರಕುತ್ತದೆಂಬ ದೃಷ್ಟಿಯಿಂದ ಏನು ಈ ಒಂದು ವಿಧೇಯಕವನ್ನು ತರುತ್ತಿದ್ದೀರಿ. ಇದು ಸ್ವಾಗತಾರ್ಹವಾದುದಾದರೂ ಸಹ, ಮುಖ್ಯವಾಗಿ ರೈತರಿಗಿರುವ ಸಮಸ್ಯೆಗಳನ್ನು ತಾವು ಅರಿತುಕೊಂಡರೆ ಒಳ್ಳೆಯದು ಎಂದು ಹೇಳುವುದಕ್ಕೆ ಬಯಸು ತ್ತೇನೆ. ಇವತ್ತು ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ, ಸರ್ಕಾರದವರು ಹೇಳುವುದೇನಂದರೆ, ರೈತರನ್ನು ಶೋಷಣೆ ಮಾಡುತ್ತಿರುವವರು ಶ್ರೀಮಂತರು ಎಂದು. ಆದರೆ ನಾನು ಹೇಳುತ್ತೇನೆ; ಸರ್ಕಾರ ಕೂಡ ಒಂದು ದೊಡ್ಡ ಶೋಷಿತ ವರ್ಗ ವಾಗಿದೆ ಎಂದು. ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಮುಖ್ಯವಾಗಿ ಸಹಕಾರ

ಸಚಿವರು ಇದನ್ನು ತಿಳಿದುಕೊಂಡರೆ ಒಳ್ಳೆಯದು. ಶೋಷಿತ ವರ್ಗದವರ ಪೈಕಿ ಸರ್ಕಾರ ಪ್ರಥಮ ಸ್ಥಾನ ಪಡೆಯುತ್ತದೆ. ಶ್ರೀಮಾನ ಹುಚ್ಚಮಾಸ್ತಿಗೌಡರು ಸಭೆಯಲ್ಲಿ ಇಲ್ಲ. ನಾನೂ ಸಹ ಇಂದು ಸರ್ಕಾರಕ್ಕೆ ಒಬ್ಬ ಸಾಲಗಾರನಾಗಿದ್ದೇನೆ. ಮತ್ತು ೧೬ ಪರಸೆಂಟ ಬಡ್ಡಿ ಕೊಟ್ಟಿದ್ದೇನೆ. ಸಣ್ಣ ಸಣ್ಣ ರೈತರನ್ನು ಶೋಷಣೆ ಮಾಡುವವರು ಶ್ರೀಮಂತರು ಎಂದು ಪ್ರತಿಪಾದನೆ ಮಾಡುವ ಸರ್ಕಾರವಾದರೂ ಸಹ ರೈತರಿಗೆ ಎಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಶ್ರೀಮಾನ ಹುಚ್ಚಮಾಸ್ತಿಗೌಡರ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ತಕಾವಿ ಸಾಲ ಕೊಟ್ಟರೆ, ಲ್ಯಾಂಡ ಇಂಪ್ರೂವಮೆಂಟ ಲೋನ ಕೊಟ್ಟರೆ ೬ ಪರಸೆಂಟ ಬಡ್ಡಿ ಕೊಡಬೇಕಾಗುತ್ತದೆ. ಈ ಸಾಲ ಪಡೆದವರು ಒಂದು ವರ್ಷದ ನಂತರ ಡಿಫಾಲ್ಟರ ಆದರೆ ೯ ಪರ್ಸೆಂಟ ಪೀನಲ್ ಇಂಟರೆಸ್ಟ ಕೊಡಬೇಕು. ಅದರ ಜೊತೆಗೆ ನೋಟೀಸು ಕೊಡುವುದು ವಗೈರೆ ಎಲ್ಲ ಲೆಕ್ಕವನ್ನು ತೆಗೆದುಕೊಂಡರೆ ಒಟ್ಟು ೧೬ ಪರಸೆಂಟ ಬಡ್ಡಿ ಕೊಡಬೇಕಾಗಿದೆ. ನನ್ನ ಹತ್ತಿರ ಇಷ್ಟು ಬಡ್ಡಿ ಕೊಟ್ಟಿರುವ ಬಗ್ಗೆ ರಶೀದಿ ಇದೆ; ಅದರಿಂದ ಹೇಳುತ್ತಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಸಮಯದಲ್ಲಿ ಮುಖ್ಯ ಮಂತ್ರಿಗಳು ಕೆಲವು ಕಡೆ ಭಾಷಣ ಮಾಡುತ್ತಾ ಶ್ರೀಮಂತರೇ ಸರ್ಕಾರಕ್ಕೆ ಹೆಚ್ಚಾಗಿ ಕೊಡಬೇಕಾಗಿರುವ ಬಾಕಿಯನ್ನು ಉಳಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರಿಗೆ ಸರ್ಕಾರದಿಂದ ಸಾಲ ತೆಗೆದುಕೊಂಡ ಅನುಭವವಿರಲಾರದು; ಏಕೆಂದರೆ ಅವರಿಗೆ ಬ್ಯಾಂಕಗಳಲ್ಲಿ ಸಾಲ ಸಿಗಬಹುದು. ಆದರೆ ಇಂದು ಸರ್ಕಾರದವರು ಶೋಷಣೆಗೆ ಒಳಗಾಗಿರುವ ರೈತರನ್ನು ಅದರಲ್ಲಿಯೂ ತಿಳಿವಳಿಕೆ ಇಲ್ಲದ ರೈತರನ್ನು ವಿಮುಕ್ತರನ್ನಾಗಿ ಮಾಡುತ್ತೇವೆಂದು ಹೇಳುವಾಗ, ಸರ್ಕಾರದವರೇ ೧೭-೧೮ ಪರ್ಸೆಂಟ ವರೆಗೆ ಬಡ್ಡಿ ಹಾಕುವುದೇ ಸರಿಯೇ ? ಮನಿಲೆಂಡರ್‌ಗಳಿಗೆ ೧೨ ಪರ್ಸೆಂಟ ಬಡ್ಡಿ ವಸೂಲ ಮಾಡುವುದಕ್ಕೆ ಈ ಮೊದಲು ಅವಕಾಶವಿತ್ತು. ಇಂದು ಅವರಿಗೂ ೧೫ ೧೮ ಪರ್ಸೆಂಟ ವರೆಗೆ ವಸೂಲ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಸರಿಯೇ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಸಣ್ಣ ರೈತರು ಎಂದರೆ ಯಾರು, ಅವರ ವರಮಾನ ಎಷ್ಟಿರಬೇಕು ಎಂಬ ಬಗ್ಗೆ ಇಲ್ಲಿ ಹೇಳಿದ್ದೀರಿ. ಒಬ ಸಣ್ಣ ರೈತ ಬೆವರು ಸುರಿಸಿ ೫೦೦ ರೂಪಾಯಿ ಸಂಪಾದನೆ ಮಾಡಿರುತ್ತಾನೆ ಅಥವಾ ತನ್ನಲ್ಲಿರುವ ಕರುವನ್ನು ಮಾರಿ ೫೦೦ ರೂಪಾಯಿಗಳನ್ನು ಇಟ್ಟಿರುತ್ತಾನೆ ಎಂದು ಇಟ್ಟು ಕೊಳ್ಳೋಣ. ಆ ಹಣವನ್ನು ಪಕ್ಕದ ಮನೆಯವರಿಗೆ ಅವರ ಕಷ್ಟಕ್ಕೆ ಎಂದು ಸಾಲ ಕೊಡುತ್ತಾನೆ. ಸಾಲ ಕೊಡುವ ಬಗ್ಗೆ ಅವನು ಮನಿ ಲೆಂಡರ ಲೈಸೆನ್ಸ ತೆಗೆದುಕೊಂಡಿರುವದಿಲ್ಲವಾದ್ದರಿಂದ, ಅವನ ಹಣಕ್ಕೆ ದಗಾ ಹಾಕಬಹುದೆಂದು ಈ ಆಕ್ಟಿನಲ್ಲಿ ಹೇಳುತ್ತೀರಿ ಲಕ್ಷಗಟ್ಟಲೆ ಹಣ ಇಟ್ಟುಕೊಂಡು ವ್ಯವಹಾರ ಮಾಡುವ ಮನಿ ಲೆಂಡರ್‌ಗಳವಿಚಾರ ಬೇರೆ. ಆದರೆ ಒಬ್ಬ ಸಣ್ಣ ರೈತ ಬೆವರು ಸುರಿಸಿ; ದನ, ಕುರಿ ಸಾಕಿ ಸಂಪಾದನೆ ಮಾಡಿದ ೫೦೦ ರೂಪಾಯಿಗಳನ್ನು ಬೇರೆ ಒಬ್ಬ ರೈತನಿಗೆ ಸಾಲವಾಗಿ ಕೊಟ್ಟರೆ, ಆ ಹಣಕ್ಕೆ ಈ ಬಿಲ್ಲಿನಲ್ಲಿ ಏನಾದರೂ ಎಗಜೆಂಷನ ಇದೆಯೋ ಎಂದು ಕೇಳುತ್ತೇನೆ. ನಾವು ಇಂದು ಯಾವ ಯುಗದಲ್ಲಿದ್ದೇವೆಂದರೆ, ಟೋಪಿ ಹಾಕುವ

ಯುಗದಲ್ಲಿದ್ದೇವೆ. ಏಕೆಂದರೆ ಒಬ್ಬ ರೈತ ಕಷ್ಟಪಟ್ಟು ೨೦೦ ಅಥವಾ ೫೦೦ ರೂಪಾಯಿ ಸಂಪಾದನೆ ಮಾಡಿ ಬೇರೆ ಒಬ್ಬ ರೈತನಿಗೆ ಸಾಲವಾಗಿ ಕೊಟ್ಟರೆ, ಅದು ಹೋಯಿತು ಎಂದರೆ, ಹಣ ಕಳೆದುಕೊಂಡವರು ನಮ್ಮಲ್ಲಿಗೆ ಬಂದು ಇದು ಸರಿಯೇ ಎಂದು ಕೇಳುತ್ತಾರೆ. ಈ ದೃಷ್ಟಿಯಿಂದ, ಈ ಆಕ್ಟಿನ ಪರಿಮಿತಿಯೊಳಗೆ ಸಣ್ಣ ಸಣ್ಣ ವ್ಯವಹಾರ ಮಾಡುವ ರೈತರಿಗೆ ದೋಕಾ ಆಗುವ ಅವಕಾಶವಾಗಬಾರದು. ಬೇಕಾದರೆ ೪೦—೫೦ ವರ್ಷಗಳಿಂದ ಬಡ್ಡಿ ತೆಗೆದುಕೊಂಡು ಲಕ್ಷಾಧೀಶ್ವರರಾಗಿರುವ ಮನಿ ಲೆಂಡರ್‌ಗಳಿಗೆ ಇದು ಅನ್ವಯವಾಗಲಿ. ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳುತ್ತಿದ್ದರು, ಮಾನ್ಯ ಗೋಪಾಲಗೌಡರು ಮೂರುನೂರು ರೂಪಾಯಿಗಳನ್ನು ಸಾಲ ತೆಗೆದುಕೊಂಡಿದ್ದಕ್ಕೆ ಅವರ ಆಸ್ತಿಯೇ ಹೋಯಿತು ಎಂದು. ಅವರು ಸಾಯುವಾಗ ಯಾವ ಆಸ್ತಿಯನ್ನು ಸಹ ಬಿಟ್ಟು ಹೋಗಲಿಲ್ಲ; ಈ ರೀತಿ ಅನ್ಯಾಯದಿಂದ ಇನ್ನೊಬ್ಬರಿಂದ ಆಸ್ತಿಯನ್ನು ಪಡೆದವರಿಗೆ ಈ ಕಾನೂನಿನಿಂದ ಬಲಿ ಹಾಕೋಣ. ಆದರೆ ಸಣ್ಣ ಸಣ್ಣ ರೈತರಿಗೆ ಇದರಿಂದ ರಕ್ಷಣೆ ಕೊಡುವದು ಒಳ್ಳೆಯದು. ಈ ಆಕ್ಟಿನ ಪರಿಮಿತಿಯೊಳಗೆ ಅದು ಬರಲಾರದೆಂದು ಕಾಣುತ್ತದೆ. ಈ ಒಂದು ಆಕ್ಟನ್ನು ಸಹಕಾರ ಸಂಘಕ್ಕೂ ಸಹ ಅನ್ವಯ ಮಾಡಿ ಎಂದು ಮಾನ್ಯ ಹನುಮೇಗೌಡರು ಹೇಳಿದರು. ಆ ರೀತಿ ಏನಾದರೂ ಅನ್ವಯುಮಾಡಿದರೆ ಸಾಲ ವಾಪಸ ಬರುವದಿಲ್ಲ. ಇಂದು ಸಹಕಾರ ಸಂಘಗಳ ಮೂಲಕ ರೈತರನ್ನು ಉದ್ಧಾರ ಮಾಡುತ್ತೇವೆಂದು ಸರ್ಕಾರದವರು ಹೊರಟಿದ್ದಾರೆ. ರೈತರಿಗೆ ಪ್ರೈವೇಟ ಮನಿ ಲೆಂಡರ್ಸ ಸಾಲ ಕೊಡುವದಿಲ್ಲ ಎಂದಾಗ, ಕಮರ್ಷಿಯಲ್ ಬ್ಯಾಂಕಿನವರಾಗಲಿ, ಕೋ-ಆಪರೇಟಿವ ಇನ್ಸಟಿಟ್ಯೂಷನ್ಸ ಆಗಲೀ, ಫೈನಾನ್ಸಿಯಲ್ ಕಾರ್ಪೋರೇಷನ್‌ನವರಾಗಲೀ, ಸಾಲ ಕೊಡಬೇಕಾಗುತ್ತದೆ. ಈ ರೀತಿ ಕಾನೂನುಗಳನ್ನು ಸರ್ಕಾರದವರು ಮಾಡುತ್ತಿರುವದರಿಂದ, ಮನಿ ಲೆಂಡರ್ಸಗೆ ಸಾಲ ಕೊಡಬೇಕೆಂಬ ಉತ್ಸಾಹ ಇಲ್ಲವಾಗಿದೆ. ಆದ ಕಾರಣ ಆ ಒಂದು ಹೊಣೆಯನ್ನು ಸರ್ಕಾರ ಹೊರಬೇಕು. ರೈತರಿಗೆ ಬೇಕಾದ ಎಲ್ಲ ರೀತಿಯ ಸಾಲಗಳನ್ನು, ವ್ಯವಸಾಯದ ಉಪಕರಣಗಳನ್ನು ಕೊಳ್ಳಲು, ಗೊಬ್ಬರ ಮತ್ತು ಬೀಜ ಕೊಳ್ಳಲು ಸಕಾಲದಲ್ಲಿ ಒದಗಿಸಬೇಕು. ಸಣ್ಣ ಸಣ್ಣ ರೈತರ ಪರಿಸ್ಥಿತಿಯನ್ನು ಸುಧಾರಿಸಬೇಕು ಎಂಬ ಮೂಲ ಉದ್ದೇಶದಿಂದ ಇಂತಹ ಕಾನೂನುಗಳನ್ನು ತರುವ ಕಾಲದಲ್ಲಿ ಸಾಲ ತೆಗೆದುಕೊಂಡ ರೈತರು ಏನಾದರೂ ಡಿಫಾಲ್ಟರ ಆದರೆ, ಅವರ ಬಗ್ಗೆ ಕೊಯರ್ಸಿವ್ ಸ್ಟೆಪ್ಸ ತೆಗೆದುಕೊಳ್ಳುವಾಗ ವಿವೇಚನೆ ಇರಬೇಕು ಮತ್ತು ವಿವಂಚನೆ ಇರಬೇಕು. ದೊಡ್ಡವರು ಏನಾದರೂ ಡಿಫಾಲ್ಟರ್ಸ ಆದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ. ಆದರೆ ೧೦೦—೧೫೦ ರೂಪಾಯಿಗಳ ಬಾಕಿ ಇಟ್ಟುಕೊಂಡಿರುವ ಸಣ್ಣ ಸಣ್ಣ ರೈತರ ಮನೆಯ ಊಟದ ಪಾತ್ರೆಗಳನ್ನು ತೆಗೆದು ಹೊರಗೆ ಬಿಸಾಕುವ ಹೇಯ ಕೆಲಸಕ್ಕೆ ಕೈಹಾಕುವುದಕ್ಕೆ ಹೋಗಬೇಡಿ. ನಮ್ಮಂತಹ ರಾಜಕಾರಣಿಗಳು ಏನಾದರೂ ೨೫ ಸಾವಿರ ರೂಪಾಯಿಗಳ ವರೆಗೆ ಬಾಕಿ ಇಟ್ಟುಕೊಂಡಿದ್ದರೆ ಅಥವಾ ಕಂದಾಯ ಕೊಡದಿದ್ದರೆ ಅಧಿಕಾರಿಗಳು ದಾವಾ ಹಾಕುವದಿಲ್ಲ. ಅದಕ್ಕೆ ಅವರು ಹೆದರುತ್ತಾರೆ. ನಾನು ಯಾರನ್ನೇ ಆಗಲಿ ಕುರಿತು ಈ ಮಾತನ್ನು ಹೇಳುತ್ತಿಲ್ಲ. ಮಂತ್ರಿಗಳು

ಏನಾದರೂ ೨೫ ಸಾವಿರ ರೂಪಾಯಿಗಳಿಗೆ ಬಾಕಿದಾರರಾಗಿದ್ದರೆ ಅವರ ಮೇಲೂ ಸಹ ಅಧಿಕಾರಿಗಳು ದಾವ ಹಾಕುವದಿಲ್ಲ. ನಾನು ವೈಯಕ್ತಿಕವಾಗಿ ಯಾರ ಬಗ್ಗೆಯೇ ಆಗಲಿ ಹೇಳಿ ಅವರ ಮುಖಕ್ಕೆ ಟಾರ ಹಾಕುವದಕ್ಕೆ ಹೋಗುವದಿಲ್ಲ. ಆದರೆ ವಿಷಯ ತಿಳಿದುಕೊಂಡಿದ್ದೇನೆ. ವೇಶ್ಯೆ ಕೆಲಸ ಮಾಡಬಾರದೆಂದು ಕಾನೂನು ಇದೆ. ಆದರೆ ಅದನ್ನು ಜಾರಿಯಲ್ಲಿ ತರುವುದಕ್ಕೆ ಕಷ್ಟವಿದೆ. ಯಾರೋ ರಾತ್ರಿ ೧೨ ಗಂಟೆಯಲ್ಲಿ ಎಲ್ಲಿಯೋ ಕುಳಿತಿದ್ದರು ಎಂದು ಪೋಲೀಸಿನವರು ಹಿಡಿದುಕೊಂಡು ಬಂದು, ಬೆಳಗಾದ ಮೇಲೆ ಅವರು ಶಾಸಕರು ಎಂದು ಗೊತ್ತಾದರೆ ಅವರನ್ನು ಬಿಟ್ಟು ಬಿಡುವುದು; ಮುಖ್ಯವಾಗಿ ಕಾನೂನುಗಳನ್ನು ಜಾರಿಗೆ ತರುವುದಕ್ಕೆ ಅಧಿಕಾರಿಗಳಿಗೆ ಕಷ್ಟವಿದೆ. ನಾವೇ ರಾಜ್ಯವಾಳುವವರಾಗಿರುವುದರಿಂದ, ನಮ್ಮ ಮೇಲೆ ಕೇಸ ಹಾಕುವುದಕ್ಕೆ ಅಧಿಕಾರಿಗಳು ತಯಾರಿಲ್ಲ. ಕಾನೂನು ಏನಿದ್ದರೂ ಬಡವರಿಗೆ ಮಾತ್ರ ಅನ್ವಯವಾಗುತ್ತದೆ ಅಷ್ಟೆ. ನಿಜವಾಗಿ ಹೇಳುವುದಾದರೆ ಬಡವರು ಯಾರು ಇದ್ದಾರೆ, ಅಧಿಕಾರಿಗಳ ಮೇಲೆ ಪ್ರಭಾವ ಬೀರುವುದಕ್ಕೆ ಅಶಕ್ತರಾದವರು ಯಾರು ಇದ್ದಾರೆ ಅಂತಹ ಸಣ್ಣ ಸಣ್ಣ ರೈತರಿಗೆ ಇದರಿಂದ ತೊಂದರೆಯಾಗುತ್ತದೆ.

ಇವೊತ್ತು ನಾನು ಇಷ್ಟು ಮಾತ್ರ ಹೇಳುತ್ತೇನೆ. ಇವೊತ್ತು ರೈತ ಏನು ಸಂಕಷ್ಟದಲ್ಲಿದ್ದಾನೆ ಅವನಿಗೆ ಈ ಕಾನೂನುಗಳ ಗೊಂದಲದಲ್ಲಿ ಪ್ರೈವೇಟ ಮನಿ ಲೆಂಡರಿಂದ ಹಣ ದೊರೆಯುವದಿಲ್ಲ. ಸಹಕಾರ ಸಂಘಗಳಿಂದಲೂ ಅವನಿಗೆ ಹಣ ಸಿಕ್ಕುವುದಕ್ಕೆ ಸಾಧ್ಯವಿಲ್ಲ. ಸಹಕಾರ ಸಂಘಗಳಲ್ಲಿ ಅವನಿಗೆ ಹಣ ಸಿಕ್ಕುವುದಕ್ಕೆ ಅಡಚಣೆ ಏನೆಂದರೆ ಅವನು ಸಹಕಾರ ಸಂಘಗಳಲ್ಲಿ ಪಡೆದಂತಹ ಹಣದಲ್ಲಿ ಕೆಲವು ಪರ್ಸೆಂಟೇಜ್ ವಾಪಸ್ಸು ಕೊಡದಿದ್ದರೆ ಮತ್ತೆ ಆ ಸಹಕಾರಸಂಘಗಳಲ್ಲಿ ಅವನು ಸಾಲವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಅವನಿಗೆ ರೀಪೇಯಿಂಗ ಕೆಪ್ಯಾಸಿಟಿ ಇಲ್ಲ ಎಂದು ಹೇಳುತ್ತಾರೆ. ಅರ್ಹತೆ ಇತ್ಯಾದಿ ಏನೇನೋ ಕೆಲವು ನಿಬಂಧನೆಗಳನ್ನು ಹಾಕಿ ಕೊಂಡಿದ್ದಾರೆ. ರೈತನಿಗೆ ಸಾಲ ಸಿಕ್ಕಬೇಕು ಎನ್ನುವ ಬಗ್ಗೆ ನಾನು ಸರ್ಕಾರದ ಮೇಲೆ ಆರೋಪಣೆ ಮಾಡುವುದಿಲ್ಲ. ಈಗಿರತಕ್ಕ ವಸ್ತು ಪರಿಸ್ಥಿತಿಯನ್ನು ನಾನು ಹೇಳಿದೆ. ಆದ್ದರಿಂದ ಅವನಿಗೆ ಇರತಕ್ಕ ಸಾಲದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಆಲೋಚನೆ ಮಾಡಬೇಕು. ಅದರ ಜೊತೆಗೆ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳ ಇಲಾಖೆಯಲ್ಲಿ ತಕಾವಿ ಸಾಲಕ್ಕೆ ೧೬ ಪರ್ಸೆಂಟ ಬಡ್ಡಿ ಬೀಳುತ್ತದೆ. ಆ ಬಗ್ಗೆ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ರಿಸಿಟ್ಸ ಕಳುಹಿಸುತ್ತೇನೆ. ನಾನು ಪಬ್ಲಿಕ್ ಅಕೌಂಟ್ಸ ಚೇರ್ಮನ್ ಆಗಿ ಕೆಲಸವನ್ನು ನಿರ್ವಹಿಸುವಾಗ ನನಗೆ ಈ ಬಗ್ಗೆ ಆಫೀಸರು ಹೇಳಿದ್ದಾರೆ. ೬ ಪರ್ಸೆಂಟ್ ಇಂಟರೆಸ್ಟ, ಡಿಫಾಲ್ಟರುಗಳಿಗೆ ೩ ಪರ್ಸೆಂಟ ಬಡ್ಡಿ ಎಲ್ಲಾ ಸೇರಿಸಿದರೆ ಕೊನೆಗೆ ಅವನಿಗೆ ೧೬ ಪರ್ಸೆಂಟ ಬೀಳುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಪುನರ್‌ಪರಿಶೀಲನೆ ಮಾಡಿ ಅತಿ ಜರೂರಾಗಿ ಒಂದು ಪರಿಹಾರವನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ರೈತನಿಗೆ ಸೊಸೈಟಿಯಲ್ಲಿ ತಮಟೆ ಹೊಡೆಯುವುದು ಜೀಪಿನ ಖರ್ಚು, ಆ ಖರ್ಚು ಈ ಖರ್ಚು ಎಲ್ಲಾ ಸೇರಿಸಿ

೨೪ ಪರ್ಸೆಂಟ ಬಡ್ಡಿಯನ್ನು ಹಾಕುವುದಕ್ಕೆ ಸಾಧ್ಯವಿದೆ. ನನ್ನ ತಾಲ್ಲೂಕಿನಲ್ಲಿ ಒಬ್ಬರಿಗೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಲ್ಲಿ ೮ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದಕ್ಕೆ ಅವನು ೬ ವರ್ಷ ಡಿಫಾಲ್ಟ್ ಆಗಿದ್ದಕ್ಕಾಗಿ ಅವನ ಮೇಲೆ ೧೬ ಸಾವಿರ ಚಿಲ್ಲರೆ ರೂಪಾಯಿಗಳಿಗೆ ದಾವಾ ಹಾಕಿದ್ದಾರೆ. ಇವರನ್ನು ನಾವು ಮನಿ ಲೆಂಡರ್ಸ್ ಎಂದು ಯೋಚನೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ರೈತನಿಗೆ ಕೆಲವು ತೊಂದರೆಗಳು ಇವೆ. ಅವುಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಆಕ್ಟನ್ನು ಕೋ-ಆಪರೇಟೀವ ಸೊಸೈಟಿಯ ಆಕ್ಟಿಗೆ ಅಪ್ಲೈ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಸಣ್ಣ ರೈತರಿಂದ ಸಾಲವನ್ನು ಮತ್ತು ಬಡ್ಡಿಯನ್ನು ವಸೂಲು ಮಾಡತಕ್ಕ ಕ್ರಮ ಏನಿವೆ ಆ ಕ್ರಮವನ್ನು ಸ್ವಲ್ಪ ಮಾರ್ಪಾಡು ಮಾಡಬೇಕು. ಅದಕ್ಕೆ ವ್ಯವಸ್ಥೆ ಮಾಡಬೇಕು. ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವವರಿಗೆ ರೂಲ್ಸ ಅನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಬೇಕಾಗುತ್ತದೆ. ಇನ್‌ಸ್ಟಾಲ್ ಮೆಂಟಿಗೆ ಪೀನಲ್ ಇಂಟರೆಸ್ಟ್ ಹಾಕುವುದು ಇತ್ಯಾದಿ ತೊಂದರೆಗಳು ಏನಿವೆ ಅವುಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ವಸೂಲು ಮಾಡುವ ಬಡ್ಡಿಯನ್ನು ಬಿಡುವುದಕ್ಕಾಗುವುದಿಲ್ಲ. ರೈತನಿಗೆ ಸುಲಭದರದಲ್ಲಿ ಸಾಲ ದೊರೆಯುವಂತೆ ಮಾಡಬೇಕು, ಪೀನಲ್ ಇಂಟರೆಸ್ಟ ಕಡಿಮೆ ಇರಬೇಕು. ಒಂದುವೇಳೆ ಈ ವರ್ಷ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಆಗದಿದ್ದರೆ ಮುಂದಿನ ವರ್ಷ ಬೆಳೆ ಬಂದಾಗ ಅದನ್ನು ವಸೂಲು ಮಾಡುವುದಕ್ಕೆ ಸೂಕ್ತ ಮಾರ್ಪಾಡು ಮಾಡಬೇಕು ಮತ್ತು ಎರಡು ವರ್ಷಗಳ ಕಾಲ ರೈತನ ಕೃಷಿ ಆಸ್ತಿಯ ಮೇಲೆ ಪೂರ್ಣ ರಕ್ಷಣೆ ನೀಡುವ ಮೈಸೂರು ಕೃಷಿ ಸಾಲಗಾರರ ತಾತ್ಕಾಲಿಕ ಮಸೂದೆಯನ್ನು ಏನು ಸರ್ಕಾರದವರು ಈ ಸಭೆಯ ಮುಂದೆ ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—

ಸನ್ಮಾನ್ಯ ಉಪಾಧ್ಯಕ್ಷರೇ, ವ್ಯವಸಾಯಗಾರರ ಸಾಲ ವಸೂಲಿಯ ಬಗ್ಗೆ ಭೂಮಿಯನ್ನು ಜಪ್ತಿ ಮಾಡುವುದನ್ನು ತಡೆ ಹಿಡಿಯುವುದಕ್ಕೆ ಏನು ಮಸೂದೆಯನ್ನು ಸರ್ಕಾರದವರು ಈ ಸಭೆಯ ಮುಂದೆ ತಂದಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮತ್ತು ಈ ಬಗ್ಗೆ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಈ ಮಸೂದೆಯ ಪುಟ ೪ ರಲ್ಲಿ ವ್ಯವಸಾಯಗಾರರಿಗೆ ಯಾರು ಯಾರಿಗೆ ಈ ಶಾಸನದ ಪ್ರಯೋಜನ ಸಿಕ್ಕುತ್ತದೆ ಎನ್ನುವುದಕ್ಕೆ ಅಲ್ಲಿ ವಿವರಣೆ ಕೊಟ್ಟಿದ್ದಾರೆ. ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಮೈಸೂರು ಭೂಸುಧಾರಣಾ ಶಾಸನದ ಪ್ರಕಾರ ಯಾರು ಸಂರಕ್ಷಿತ ಗೇಣಿದಾರರಾಗಿದ್ದಾರೆ, ಅಂಥಾ ಸಂರಕ್ಷಿತ ಗೇಣಿದಾರರಿಗೆ ಈ ಶಾಸನದ ಮೂಲಕ ಅವನ ಸಾಲವನ್ನು ವಸೂಲು ಮಾಡುವುದಕ್ಕೆ ಅವನ ಸ್ವಾಧೀನದಲ್ಲಿರುವಂತಹ ಭೂಮಿಯನ್ನು ಜಪ್ತಿ ಮಾಡುವುದಕ್ಕೆ ತಡೆಯನ್ನು ತರುತ್ತಾರೆ ಎಂದು ಇದೆ. ನ್ಯಾಯವಾಗಿ ನೋಡಿದರೆ ಪ್ರೊಟೆಕ್ಟೆಡ್ ಟೆನೆಂಟ್ ಸಂರಕ್ಷಿತ

ಗೇಣಿದಾರ ಎನ್ನುವುದಕ್ಕಿಂತಲೂ ಹೆಚ್ಚಿಗೆ ರಕ್ಷಣೆ ಸಿಕ್ಕಬೇಕಾಗಿರುವುದು ಪ್ರತಿಯೊಬ್ಬ ಗೇಣಿದಾರನಿಗೂ ರಕ್ಷಣೆ ಸಿಕ್ಕಬೇಕಾಗಿದೆ. ೧೨ ವರ್ಷಗಳಿಗಿಂತ ಹೆಚ್ಚು ಅವನು ಜಮೀನನ್ನು ಗೇಣಿಗೆ ವ್ಯವಸಾಯ ಮಾಡುತ್ತಿದ್ದ ಎನ್ನುವುದನ್ನು ರುಜುವಾತು ಮಾಡಿ ಸಾಧಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಮೈಸೂರು ಭೂಸುಧಾರಣಾ ಶಾಸನವನ್ನು ತಿದ್ದುಪಡಿ ಮಾಡಿ ನಾವು ಇಲ್ಲಿ ಗೇಣಿದಾರರಿಗೆ ವಿಶೇಷವಾದ ರಕ್ಷಣೆಯನ್ನು ಕೊಡುವ ಯೋಜನೆಯನ್ನು ಈ ಸಭೆಯಲ್ಲಿ ಮಾಡುತ್ತಿದ್ದೇವೆ. ಅದು ಕಾನೂನಾಗಿ ರಾಷ್ಟ್ರಾ-ಧ್ಯಕ್ಷರ ಅಂಕಿತವನ್ನು ಪಡೆದು ಗೇಣಿದಾರರಿಗೆ ಅವರ ವಶದಲ್ಲಿರುವ ಜಮೀನು ಅವರ ಕೈ ತಪ್ಪಿ ಹೋಗದ ಹಾಗೆ ಅವರಿಗೆ ರಕ್ಷಣೆ ಸಿಕ್ಕಬೇಕಾದರೆ ಸ್ವಲ್ಪ ಸಮಯಬೇಕಾಗುತ್ತದೆ. ಇಂಥಾ ಸಂಧಿಕಾಲದಲ್ಲಿ ತಾತ್ಕಾಲಿಕವಾಗಿ ಅವನಿಗೆ ರಕ್ಷಣೆ ಕೊಡುವ ಕಾನೂನನ್ನು ತರುವಾಗ ಎಲ್ಲಾ ರೈತರಿಗೂ, ಎಲ್ಲಾ ಗೇಣಿದಾರರಿಗೂ ರಕ್ಷಣೆ ಸಿಕ್ಕುವ ಹಾಗೆ ಇದನ್ನು ತಿದ್ದುಪಡಿ ಮಾಡುವದು ಅಗತ್ಯ. ಆದ್ದರಿಂದ ಪ್ರೊಟೆಕ್ಟೆಡ್ ಟೆನೆಂಟ್ ಎಂದು ಇರುವುದನ್ನು ಬದಲಾವಣೆ ಮಾಡಿ ಟೆನೆಂಟ್ ಎಂದು ಇಡುವುದು ಬಹಳ ಅವಶ್ಯ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಡೆ ಕೆಲವು ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೂ ಇನ್ನೂ ಕೆಲವು ಕಡೆಗಳಲ್ಲಿ ವ್ಯವಸಾಯಗಾರರು ೧೦೦ ಕ್ಕೆ ೮೦ ಜನ ಗೇಣಿದಾರರು ಇದ್ದಾರೆ. ಬಹಳ ಮಂದಿ ಸಾಮಾನ್ಯ ಗೇಣಿದಾರರಾಗಿದ್ದಾರೆ. ಅವರ ಸಾಲದಲ್ಲಿ ಹೆಚ್ಚಿನ ಅಂಶ ಗೇಣಿ ಭಾಗದ ಸಾಲ ಇರುತ್ತದೆ. ಇಂಥಾ ಗೇಣಿದಾರರಿಗೆ ಕಾನೂನು ಮೂಲಕ ರಕ್ಷಣೆ ಸಿಕ್ಕುವಂಥಾದ್ದು ಆಗತ್ಯ. ಆ ರೀತಿ ಅವರಿಗೆ ರಕ್ಷಣೆ ಸಿಕ್ಕಿದರೆ ಮಾತ್ರ ನಿಜವಾದ ವ್ಯವಸಾಯಗಾರನಿಗೆ ಸ್ವಂತ ವ್ಯವಸಾಯ ಮಾಡುವವರಿಗೆ ಈ ಕಾನೂನು ಮೂಲಕ ರಕ್ಷಣೆ ಕೊಟ್ಟಹಾಗಾಗುತ್ತದೆ. ಆದ್ದರಿಂದ ಪ್ರೊಟೆಕ್ಟೆಡ್ ಟೆನೆಂಟ್ ಎಂದು ಇರುವುದನ್ನು ಬದಲಾವಣೆ ಮಾಡಿ ಎಲ್ಲಾ ತರಹ ಗೇಣಿದಾರರಿಗೂ ರಕ್ಷಣೆ ಸಿಕ್ಕುವ ಹಾಗೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈ ಕಾನೂನು ಮೂಲಕ ವ್ಯವಸಾಯಗಾರರಿಗೆ ರಕ್ಷಣೆ ಕೊಡುವಾಗ ನಮ್ಮ ಅನುಭವದಲ್ಲಿರುವ ಹಾಗೆ ದೊಡ್ಡ ದೊಡ್ಡ ಶ್ರೀಮಂತರು ಜಮೀನ್ದಾರರು ಏನಿದ್ದಾರೆ ಅವರಿಗೆ ಈ ಗೇಣಿದಾರರು ದುಬಾರಿ ಬಡ್ಡಿ ಕೊಡುವ ಸಾಲಗಾರರಾಗಿದ್ದಾರೆ. ಈ ದೊಡ್ಡ ದೊಡ್ಡ ಜಮೀನ್ದಾರರು ಶ್ರೀಮಂತರು ಹಳ್ಳಿಯ ರೈತನಿಗೆ ಸಾಲ ಕೊಟ್ಟು ಅವರಿಂದ ಒಂದಕ್ಕೆ ಎರಡರಷ್ಟು ಎಂದರೆ ಒಂದು ಸಾವಿರ ರೂಪಾಯಿಗಳನ್ನು ಸಾಲ ಕೊಟ್ಟಿದ್ದರೆ ೨ ಸಾವಿರ ರೂಪಾಯಿಗಳಿಗೆ ಪ್ರೋನೋಟ್ ಬರೆಸಿಕೊಂಡಿದ್ದಾರೆ. ಅದೂ ದುಬಾರಿ ಬಡ್ಡಿಗೆ ರೈತನಿಗೆ ಸಾಲ ಕೊಡುವವರಾಗಿದ್ದಾರೆ. ಆದ್ದರಿಂದ ರೈತರಿಗೆ ರಕ್ಷಣೆ ಕೊಡುವಾಗ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಕ್ಕುವುದಕ್ಕೆ ಬೇಕಾದಂತಹ ಬೇರೆ ವ್ಯವಸ್ಥೆಯನ್ನು ರೂಪಿಸುವುದು ಬಹಳ ಅಗತ್ಯ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಶ್ರೀಮಾನ್ ದೇವೇಗೌಡರು ಏನು ಹೇಳಿದ್ದಾರೆ ಅದನ್ನು ನಾನು ಪುಷ್ಟೀಕರಿಸಿ ಮಾತನಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಯವರು ಹುಣಸೂರಿನಲ್ಲಿ ಕಡಿಮೆ ಬಡ್ಡಿಗೆ ಸಾಲ ಕೊಡಿಸಬೇಕೆಂದು ಹೇಳಿದ್ದಾರೆ.

4–30 P.M.

ಶ್ರೀ ಬಿ. ವಿ. ಕಕ್ಕಿಲಾಯ.—ಅದು ನನಗೆ ಗೊತ್ತಿಲ್ಲ. ಆದರೆ ಕೋ-ಆಪರೇಟಿವ ಸೊಸೈಟಿಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ರೈತರಿಗೆ ಕೊಡುವ ಸಾಲದ ಮೇಲೆ ೯--೧೦ ಪರಸೆಂಟ ಬಡ್ಡಿ ವಸೂಲು ಮಾಡುತ್ತಿದ್ದಾರೆ. ಇವರಿಗೆ ಉಳಿದ ಬ್ಯಾಂಕಿನಿಂದ ಅಥವಾ ರಿಸರ್ವ ಬ್ಯಾಂಕಿನಿಂದ ಮುಕ್ಕಾಲು ಪರಸೆಂಟ ಅಥವಾ ಒಂದು ಪರಸೆಂಟಿಗೆ ಸಿಕ್ಕಿದ ಹಣವನ್ನು ೯--೧೦ ಪರಸೆಂಟಗೆ ರೈತರಿಗೆ ಕೊಟ್ಟರೆ, ಇವರು ಬಾಕಿ ರೈತರ ಶೋಷಣೆ ಮಾಡತಕ್ಕಂತಹ ಸಾಹುಕಾರರಿಗಿಂತ ಯಾವ ರೀತಿಯಲ್ಲಿ ಕಡಿಮೆ ಇದ್ದಾರೆ ಎಂದು ಕೇಳುತ್ತೇನೆ. ಈ ರೀತಿ ಕೊಡುವುದರಲ್ಲಿ ಯಾವ ಅರ್ಥವೂ ಇಲ್ಲ. ಇದನ್ನು ಮಾನ್ಯ ಮಂತ್ರಿಯವರು ಯೋಚನೆ ಮಾಡಬೇಕು. ಅದಲ್ಲದೆ ಅವರ ಮೇಲೆ ಪೀನಲ ಇಂಟರೆಸ್ಟ ಸಹ ಹಾಕುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಬಡ ರೈತರಿಗೆ ಕಡಿಮೆ ದರದಲ್ಲಿ ಸಾಲ ಸಿಗಬೇಕೆಂದು ಉದ್ದೇಶ ಇರುವುದು. ಆದರೆ ಇವತ್ತು ಆಗುತ್ತಾ ಇರುವದು ಬೇರೆಯೆ. ಉದಾಹರಣೆಗೆ ದೊಡ್ಡ ದೊಡ್ಡ ಅಟೊಮೊಬೈಲ ಇಂಡಸ್ಟ್ರಿ ಮಾಡುವವರಿಗೆ ೧೦೦ ರೂಪಾಯಿ ಅತ ಶ್ಯಾರ ಹಾಕಿದರೆ ಅದಕ್ಕೆ ಬೇಕಾದಂತಹ ಬಾಕಿ ಎಲ್ಲಾ ಹಣವನ್ನು ಬ್ಯಾಂಕುಗಳ ಮುಖಾಂತರ ಪಡೆಯುವದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಈಗ ಮಾರುತಿ ಕಾರ ಪ್ರೊಜೆಕ್ಟಿಗೆ ೧೦೦೦ ರೂಪಾಯಿ ಭಂಡವಾಳ ಸಂಜಯ ಗಾಂಧಿ ಹಾಕಿದರೆ, ಬಾಕಿ ಭಂಡವಾಳವನ್ನು ಬ್ಯಾಂಕಿನವರು ಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ನನ್ನ ಮಗನ ಹೆಸರಿನಲ್ಲಿ ಒಂದು ಟ್ರ್ಯಾಕ್ಟರ ಕಾರಖಾನೆಯನ್ನು ಮಂಡ್ಯದಲ್ಲಿ ಸ್ಥಾಪನೆ ಮಾಡಬೇಕೆಂದು ಇದ್ದೇನೆ. ಅದಕ್ಕೆ ದಯವಿಟ್ಟು ಬ್ಯಾಂಕುಗಳಿಂದ ಭಂಡವಾಳವನ್ನು ತೆಗೆಸಿಕೊಡುತ್ತೀರಾ?

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ಹೇಳುವುದು, ನೀವು ಕೈಗಾರಿಕೆಗಳಿಗೆ ಬಹಳ ಮಟ್ಟಿಗೆ ಹೆಚ್ಚಿನ ಸಹಾಯ ಮತ್ತು ಅನುಕೂಲತೆಗಳನ್ನು ಮಾಡಿ ಕೊಡತ್ತಿದ್ದೀರಿ. ಆದರೆ ವ್ಯವಸಾಯಗಾರರಿಗೆ ಯಾವ ಅಂಥ ಅನುಕೂಲಗಳನ್ನು ಸಹ ಮಾಡುತ್ತಾ ಇಲ್ಲ. ಸಾಲ ಕೊಟ್ಟರೂ ಸಹ ಅವರಿಗೆ ಒಂದಕ್ಕೆ ಎರಡರಷ್ಟು ಪೀನಲ ಇಂಟರೆಸ್ಟ ಹಾಕಿ ಈ ನ್ಯಾಷನಲೈಸಡ ಬ್ಯಾಂಕ್ಸ ವಸೂಲು ಮಾಡುತ್ತಿದ್ದಾರೆ. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದು ಏಕೆಂದರೆ, ನಮ್ಮ ದೇಶದಲ್ಲಿರತಕ್ಕಂತಹ ಬಹುಸಂಖ್ಯಾತ ಬಡಜನರಿಗೆ ಮತ್ತು ರೈತರಿಗೆ ಸಹಾಯವಾಗಬೇಕೆಂದು. ಆದ್ದರಿಂದ ವ್ಯವಸಾಯಗಾರರಿಗೆ ಬೇಕಾದಂತಹ ವಸ್ತುಗಳನ್ನು, ಗೊಬ್ಬರವನ್ನು ಮತ್ತು ಹಣಕಾಸು ಸಹಾಯವನ್ನು ಬಹಳ ಕಡಿಮೆ ದರದ ಬಡ್ಡಿಗೆ ಒದಗಿಸಿಕೊಟ್ಟು, ಅನುಕೂಲ ಮಾಡಿಕೊಡಬೇಕು. ಅಲ್ಲದೆ ಅವು

ಗಳನ್ನು ಕೋ-ಆಪರೇಟಿವ ಸೊಸೈಟಿಗಳ ಮುಖಾಂತರ ಒದಗಿಸಿ ಕೊಡಬೇಕು. ಆದರೆ ಮಾನ್ಯ ಸಹಕಾರ ಸಚಿವರು ಹೇಳುವದನ್ನು ಕೇಳಿದರೆ ನನಗೆ ಬಹಳ ವ್ಯಸನವಾಗುತ್ತಿದೆ. ಅವರು, ಒಂದು ಪರಸೆಂಟಿಗೆ ತೆಗೆದುಕೊಂಡದ್ದನ್ನು ೯–೧೦ ಪರಸೆಂಟಿಗೆ ತೆಗೆದು ಕೊಡದಿದ್ದರೆ ಖರ್ಚು ವೆಚ್ಚಗಳನ್ನು ಹೇಗೆ ನಿಭಾಯಿಸುವುದು ಎಂದು ಕೇಳುತ್ತಿದ್ದಾರೆ. ಈ ರೀತಿ ಹೇಳುವದು ಸರಿಯಲ್ಲ. ಇವರು ಅಷ್ಟು ತಲೆಭಾರದ ಖರ್ಚನ್ನು ಏಕೆ ವಹಿಸಿಕೊಳ್ಳಬಾರದು? ಈ ಸಂದರ್ಭದಲ್ಲಿ ಕವಿ ಕುವೆಂಪುರವರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಅವರು ಎಲ್ಲಾ ಭಾರವನ್ನು ವಿಧಾನ ಸೌಧ ಹೊರುತ್ತದೆ. ಅಂದಹಾಗೆ ಎಲ್ಲ ಭಾರವನ್ನು ಬಡ ರೈತನ ಮೇಲೆ ಹಾಕಿದರೆ ಹೇಗೆ ಆತನು ತಡೆದುಕೊಳ್ಳಬೇಕು? ಈ ರೀತಿ ನೀವು ಮಾಡುವದರಿಂದ ದುಬಾರಿ ಬಡ್ಡಿ ವಸೂಲು ಮಾಡುವಂತಹ ಸಾಹುಕಾರರನ್ನು ಹತೋಟಿಯಲ್ಲಿಟ್ಟುಕೊಳ್ಳುವದಕ್ಕೆ ನಿಮಗೆ ನೈತಿಕ ಹಕ್ಕು ಎಲ್ಲಿಂದ ಬರುತ್ತದೆ ಎಂದು ಕೇಳುತ್ತೇನೆ. ಬೇಕಾದರೆ ನೀವು ಮೀನುಗಾರರಿಗೆ ಸಹಾಯ ಮಾಡಿದ ಹಾಗೆ ಮಾಡಬಹುದು. ಈ ಸಾರಿ ಮೀನು ಕಡಿಮೆ ಸಿಗುತ್ತವೆ ಎಂದು ಮೀನುಗಾರ ಕುಟುಂಬಕ್ಕೆ ೨೫೦ ರೂಪಾಯಿ ಬಡ್ಡಿರಹಿತ ಸಾಲವಾಗಿ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಬಡ ರೈತರಿಗೆ ಸಹ ಬಹಳ ಕಡಿಮೆ ದರದ ಬಡ್ಡಿಯಲ್ಲಿ ಸಾಲವನ್ನು ಕೊಡುವ ಏರ್ಪಾಡು ಮಾಡಬಹುದು. ಆದ್ದರಿಂದ ಕಡಿಮೆ ದರದ ಬಡ್ಡಿಯಲ್ಲಿ ದೀರ್ಘಾವಧಿಯ ಸಾಲವನ್ನು ಅವರಿಗೆ ಕೊಡಬೇಕು. ಕಡಿಮೆ ದರದ ಬಡ್ಡಿಯಲ್ಲಿ ಸಾಲವನ್ನು ರೈತರಿಗೆ ಒದಗಿಸುವದರ ಬಗ್ಗೆ ಸರ್ಕಾರ ಆರ್ಥಿಕ ತಜ್ಞರ ಮತ್ತು ರಿಸರ್ವ ಬ್ಯಾಂಕಿನವರ ಸಲಹೆಯನ್ನು ಪಡೆದು ಸಾಲವನ್ನು ಕೊಡುವ ಏರ್ಪಾಡು ಮಾಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri C. M. ARUMUGHAM.—Mr. Deputy Speaker, there is a move on the part of a certain section of this House to topple the Government or change the leadership.

Mr. DEPUTY SPEAKER.—We are now in the midst of the Bill. What the Hon. Member is saying now is beyond the scope of the Bill. I thought he wanted to speak on the Bill.

Sri C. M. ARUMUGHAM.—What is there to speak on this Bill?

Mr. DEPUTY SPEAKER.—I cannot permit that.

Sri C. M. ARUMUGHAM.—Sir, we are interested in the continuance of this Government and its functioning. Since we have passed the budget, we are interested in the continuance of the Ministers. I understand that the Hon. Minister of State for Major Irrigation Sri Nanje Gowda is playing a

leading role in persuading the dissidents to withdraw their signatures. I therefore want a statement from the Government whether the Ministers will continue or whether there will be any change.

Mr. DEPUTY SPEAKER.—Let us have some sense of proportion.

Sri C. M. ARUMUGHAM.—Since some persons have gone to Delhi to represent against the Chief Minister and since there is a talk that the Government may collapse, let the Government come forward and say 'no'. How can we keep quite when some people have gone to Delhi with a memorandum?

Mr. DEPUTY SPEAKER.—That is completely outside the scope. I have understood what the hon. member has said. Not only that. I have also understood what he has in his mind. We are in the midst of discussing the Bill. I call upon the Minister for Co-operation to reply.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಗಹನವಾದ ವಿಚಾರ. ಮಂತ್ರಿ ಮಂಡಲ ಬದಲಾವಣೆಯಾಗತಕ್ಕ ವಿಷಯ ಅಲ್ಲಿ ಚರ್ಚೆಯಾಗುವಾಗ.......

Sri H. D. DEVE GOWDA.—We are eager to know what exactly is the position. We understand that 45 members have signed to remove this ministry. Sri H.N. Nanje Gowda is going round the Hall and sitting with members.

Mr. DEPUTY SPEAKER.—I have called upon the Minister to reply.

Sri H. D. DEVE GOWDA.—75 persons have signed to change the Leader. That is the information I have.

Sri A. SHANKAR ALVA.—Till another ministry comes, this ministry continues. Nothing has happened now.

Sri H. D. DEVE GOWDA.—We want to hear from Sri H. N. Nanje Gowda.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಬಹಳ ಗಣ್ಯವಾದಂಥ ವಿಷಯ. ಆದ್ದರಿಂದ ಈ ವಿಚಾರದಲ್ಲಿ ನಾನೂ ಸಹ ಒಂದು ವಾಕ್ಯವನ್ನು ಹೇಳಬಹುದಲ್ಲವೇ?

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳನ್ನು ಈಗಾಗಲೇ ಉತ್ತರ ಹೇಳವುದಕ್ಕೆ ಕರೆದಿದ್ದೇನೆ.